ಹೊಸ ಮನುಷ್ಯ


ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧೦ ಜನವರಿ-೨೦೧೦ ಸಂಚಿಕೆ-೬



ನನ್ನ ಕನಸಿನ ಭಾರತವನ್ನು ಹಾಳುಗೆಡುಹದಿರಿ

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಜನವರಿ - ೨೦೧೦

ಸಂಪುಟ - ೧೦

ಸಂಚಿಕೆ - ೬

ಸಂಪಾದಕ

ಸುರೇಂದ್ರ ಕೌಲಗಿ

ಸಲಹಾ ಸಮಿತಿ

ಜನಪದ ಸೇವಾ ಟ್ರಸ್ಟ್

ಧರ್ಮದರ್ಶಿ ಮಂಡಳಿ

ಚಂದಾ ವಿವರ

ವಾರ್ಷಿಕ : ರೂ ೧೦೦/-

ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ

ಜನಪದ ಸೇವಾ ಟ್ರಸ್ಟ್(ರಿ)

ಮೇಲುಕೋಟೆ-೫೭೧೪೩೧

ಜಿಲ್ಲಾ ಮಂಡ್ಯ

✆08236 316344

e-mail : janapada@yahoo.com

web: janapada.net

ಶ್ರೀ ಶರಣ

ಅದೋ ಯಮುನಾ ತಟ
ಇದೋ ರಾಜಘಾಟ!

ಕೆಂಪುಕೋಟೆಯ ಪೆಂಪು ಕಾಣಲಿಲ್ಲಿಲ್ಲ;
ತಾಜಮಹಲಿನ ಸಿರಿಯು ನೆನೆಯಲಿಲ್ಲಿಲ್ಲ;
'ಮಿನಾರ'ದೆತ್ತರವು ಪಿರಮಿಡಿನ ಬಿತ್ತರವು
ಆ ಅಜಂತೆಯ ಚಿತ್ರ ಮೊದಲೆ ಇಲ್ಲ;
ಗರ್ಭಗುಡಿಗೋಪುರವು
ರಂಗಮಂಟಪ ಹರಹು
ಗಂಟೆ ಜಾಗಟೆ ಪೂಜೆ ಇಲ್ಲವೇ ಇಲ್ಲ!

ಅಂದಣದ ದುಂದುಭಿಯ ರಥದ ಕಹಳೆಯ ವೇದ-
ಮಂತ್ರ ಘೋಷದ ಗರಿಮೆ ಕೇಳಿಸುವುದಿಲ್ಲ!
ಈ ಯುಗದ ಪರಮೋಚ್ಚ
ಪರಮಪಾವನ ಚರಿತ,
ಆ ಮಹಾ ಪುರುಷ ಮಲಗಿರುವನಿಲ್ಲಿ!
ಸುಭಗ ನಿರ್ಮಲವಹ ಸಮಾಧಿಯಲ್ಲಿ!

ಇರುವನಿತು ಸರಳತೆಯ ಸರಿಯಾಗಿ ಬಾಳಿದನು
ವಿಶ್ವಜೀವಿಗಳೆದೆಯ ಸಾಮ್ರಾಜ್ಯವಾಳಿದನು;
ನಾಡ ಪಣ್ಯವೆ ಪುರುಷ ರೂಪವಾಗಿ ನಿಂದಂತೆ
ದಿವ್ಯತೆಯೆ ದೇಹವನು ಧರಿಸಿ ಐತಂದಂತೆ
ಮಾನವ ಪ್ರೇಮವೇ ಮೈದಾಳಿ ಬಂದಂತೆ
ನಿಷ್ಕಾಮ ಕರ್ಮವೇ ಸಾಕಾರವಾದಂತೆ
ಬದುಕಿದನು ಭವ್ಯತೆಯ, ಶತ್ರುವನೆ ಪ್ರೀತಿಸುತ
ಸೇವಾ ಪದೀಪದಿಂ ನಾಲ್ದೆಸೆಯ ಬೆಳಗಿಸುತ

ಇಂಥ ಸಂತರಸಂತ ಮಲಗಿರುವ ತಾಣದಲಿ
ಈ ನಿಜದ ನೆಲೆಯಲ್ಲಿ ಒಲವಿನ ನಿಧಾನದಲಿ
ಕರಗುವುದು ಮೋಡದೊಲು ಆಡಂಬರ!
ಇಳೆಯಗುಡಿ, ಗೋಪುರವು ನೀಲಾಂಬರ!

ಇದೋ ಯಮುನಾ ತಟ
ಇದೋ ರಾಜಘಾಟ!

— *ಕಾವ್ಯಾನಂದ*

ವಿಚಾರ ದೀಪ್ತಿ

ನಾನೊಬ್ಬ ಸತ್ಯಶೋಧಕ. ಅದಕ್ಕೊಂದು ಮಾರ್ಗವನ್ನು ಕಂಡುಕೊಂಡಿದ್ದೇನೆಂದು ನನ್ನ ವಿಶ್ವಾಸ. ಅದರ ಸಿದ್ಧಿಗಾಗಿ ನಾನು ನಿರಂತರ ಪ್ರಯತ್ನಶೀಲನಾಗಿದ್ದೇನೆಂದೂ ನನ್ನ ನಂಬಿಕೆ. ಅದು ಇನ್ನೂ ನನಗೆ ಸಿದ್ಧಿಸಿಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಸತ್ಯದ ಸಮ್ಯಕ್ ದರ್ಶನವೇ ಆತ್ಮಸಾಕ್ಷಾತ್ಕಾರ; ಅದೇ ಜೀವನದ ಅಂತಿಮ ಗುರಿ – ಅಂದರೆ ಪರಿಪೂರ್ಣತೆಯ ಸಿದ್ಧಿ. ನನ್ನ ನ್ಯೂನತೆಗಳು ಎಷ್ಟೆಂಬುದನ್ನು ನಾನು ವ್ಯಸನದಿಂದ ಅರಿತಿದ್ದೇನೆ. ಆ ಅರಿವು ನನಗೆ ದುಃಖ ತರುವಷ್ಟೂ ಇದೆ. ಆ ಅರಿವೇ ನನ್ನ ಶಕ್ತಿಯ ಸರ್ವಮೂಲ; ಏಕೆಂದರೆ ತನ್ನ ದೌರ್ಬಲ್ಯಗಳ ಅರಿವಾಗುವುದೇ ಮಾನವನಿಗೆ ಒಂದು ಅಪೂರ್ವ ಬಲ.

ಮನಸ್ಸಿನಲ್ಲಿ, ಮಾತಿನಲ್ಲಿ, ಕೆಲಸದಲ್ಲಿ ಅತ್ಯಂತ ಋಜುವಾಗಿ, ಅತ್ಯಂತ ಸತ್ಯವಾಗಿ, ಅತ್ಯಂತ ಅಹಿಂಸಕವಾಗಿ ನಡೆಯಬೇಕೆಂದು ಹೋರಾಡುತ್ತಿದ್ದರೂ ನನಗೆ ಸರಿಯೆಂದು ತಿಳಿದ ಗುರಿಯನ್ನು ಮುಟ್ಟಲು ಹಂಬಲಿಸಿ ಹೆಣಗುತ್ತ ಸತತವೂ ಸೋಲುತ್ತಿರುವ ನಾನು ಒಬ್ಬ ಸಾಮಾನ್ಯ ಚೇತನ. ಆ ಯಾತ್ರೆಯೇನೋ ಕ್ಲೇಶಕರವೇ; ಆದರೆ ಆ ಯಾತನೆಯಲ್ಲಿಯೂ ನನಗೆ ಒಂದು ಆನಂದವಿದೆ. ಏರುವ ಒಂದೊಂದು ಹೆಜ್ಜೆಯೂ ನನ್ನನ್ನು ಬಲಿಷ್ಠನನ್ನಾಗಿ ಮಾಡಿ ಮುಂದಣ ಹೆಜ್ಜೆಗೆ ಸಾಮರ್ಥ್ಯವೀಯುತ್ತದೆ.

ದಾರಿ ನನಗೆ ಗೊತ್ತು. ಅದು ನೇರ ಮತ್ತು ಇಕ್ಕಟ್ಟು – ಕತ್ತಿಯ ಅಲಗಿನಂತೆ. ಅದರ ಮೇಲೆ ನಡೆಯುವುದೆಂದರೆ ನನಗೆ ಉಲ್ಲಾಸ. ಜಾರಿದಾಗಲೆಲ್ಲ ಕಣ್ಣೀರಿಡುತ್ತೇನೆ. 'ನ ಮೇ ಭಕ್ತಃ ಪ್ರಣಶ್ಯತಿ' ಎಂದು ದೇವರ ವಚನವಿದೆ. ಆ ವಚನದಲ್ಲಿ ನನಗೆ ದೃಢವಾದ ನಂಬಿಕೆಯಿದೆ. ಆದ್ದರಿಂದ ನನ್ನ ದೌರ್ಬಲ್ಯದ ಪರಿಣಾಮವಾಗಿ ಸಾವಿರ ಬಾರಿ ಸೋತರೂ ನಾನೆಂದಿಗೂ ಶ್ರದ್ಧೆಗೆಡುವುದಿಲ್ಲ. ಪ್ರತಿಯಾಗಿ, ಇಂದಲ್ಲ ನಾಳೆ, ಶತಸ್ಸಿದ್ಧವಾಗಿ ಕೈಗೂಡಲೇಬೇಕಾಗಿರುವ ಇಂದ್ರಿಯ ಜಯ ಲಭಿಸಿದಂದು, ಬೆಳಕನ್ನು ಕಂಡೇ ಕಾಣುತ್ತೇನೆಂಬುದು ನನ್ನ ವಿಶ್ವಾಸ.

ಏಕೆಂದರೆ, ಸಾವಿನ ನಡುವೆ ಬಾಳು, ಸುಳ್ಳಿನ ನಡುವೆ ಸತ್ಯ, ತಮಸ್ಸಿನ ನಡುವೆ ಜ್ಯೋತಿ ಚಿರಸ್ಥಾಯಿಯಾಗಿರುವುದನ್ನು ನಾನು ಕಾಣುತ್ತಿದ್ದೇನೆ. ಭಗವಂತನೇ ಪ್ರಾಣಶಕ್ತಿ, ಅವನೇ ಸತ್ಯ ಮತ್ತು ಜ್ಯೋತಿ ಎಂಬುದು ನನ್ನ ವಿಶ್ವಾಸ. ಆತ ಪ್ರೇಮಸ್ವರೂಪಿ; ಆತನೇ ಪರಮಶ್ರೇಯಸ್ಸು.

ಬಾಲ್ಯದಿಂದಲೂ ನಾನೊಬ್ಬ ಸತ್ಯಾರಾಧಕ ಎಂಬುದು ನನ್ನ ವಿಶ್ವಾಸ. ಅದು ನನ್ನ ಅತ್ಯಂತ ಸಹಜಪ್ರವೃತ್ತಿ. ಉಪಾಸನಾಪೂರ್ವಕವಾದ ಶೋಧನೆಯಿಂದ ಭಗವಂತನೇ ಸತ್ಯ ಎಂಬ ರೂಢಿಯ ನಂಬಿಕೆಯ ಬದಲು ಸತ್ಯವೇ ಭಗವಂತ ಎಂಬ ಸೂತ್ರ ನನಗೆ ಸ್ಫುರಣವಾಯಿತು. ಭಗವಂತನನ್ನು ಪ್ರತ್ಯಕ್ಷವೋ ಎಂಬಂತೆ ಕಾಣಲು ಈ ಸೂತ್ರದಿಂದ ನನಗೆ ಸಾಧ್ಯವಾಗಿದೆ. ನನ್ನ ಚೇತನಸಮಸ್ತವನ್ನೂ ಆತ ವ್ಯಾಪಿಸಿದ್ದಾನೆ ಎಂಬುದು ನನ್ನ ಅನುಭವ.

– ಮೋ.ಕ.ಗಾಂಧೀ

ನನ್ನ ಕನಸಿನ ಭಾರತವನ್ನು ಹಾಳುಗೆಡುಹದಿರಿ : ಗಾಂಧೀ

- ಸುರೇಂದ್ರ ಕೌಲಗಿ

"ಭಾರತ ತನ್ನ ಆತ್ಮವನ್ನು ಕಳೆದುಕೊಳ್ಳುವ ಅಪಾಯದಲ್ಲಿದೆ. ಆತ್ಮವನ್ನು ಕಳೆದುಕೊಂಡು ಭಾರತ ಬದುಕಲಾರದು. ಆದ್ದರಿಂದ ಭಾರತ ತನ್ನ ಆಲಸ್ಯತನದಿಂದಾಗಲೀ, ನಿಃಸಹಾಯಕತೆಯಿಂದಾಗಲೀ ಪಶ್ಚಿಮದಿಂದಾಗುತ್ತಿರುವ ನುಗ್ಗುವಿಕೆಯಿಂದ ತಪ್ಪಿಸಿಕೊಳ್ಳಲಾರದೆಂದು ಹೇಳಲೇ ಕೂಡದು. ತನಗೋಸ್ಕರ ಮತ್ತು ಜಗತ್ತಿಗೋಸ್ಕರ ಆ ನುಗ್ಗುವಿಕೆಯನ್ನು ಭಾರತ ಎದುರಿಸಲು ಬಲಶಾಲಿಯಾಗಲೇ ಬೇಕು. - ಗಾಂಧೀ

೧೯೪೮ರ ಜನವರಿ ೩೦ರಂದು ಗಾಂಧೀಜಿಯವರ ಹತ್ಯೆಯಾಯಿತು. ಆ ದಿನವೇ ಗಾಂಧೀಜಿಯವರ ಕನಸಿನ ಭಾರತದ ಹತ್ಯೆಯೂ ಆಯಿತು! ಗಾಂಧೀಜಿಯವರ ಕನಸಿನ ಭಾರತದ ಪುನರ್ ಸೃಷ್ಟಿಗಾಗಿ ಕಾಯಬೇಕಾಗಿದೆ. ದಕ್ಷಿಣ ಆಫ್ರಿಕಾದಲ್ಲಿ ೨೨ವರ್ಷ ಅಲ್ಲಿಯ ವರ್ಣದ್ವೇಷದ ವಿರುದ್ಧ ಹೋರಾಡಿ ಯಶಸ್ಸು ಪಡೆದು ಭಾರತಕ್ಕೆ ಮರಳಿದ ಮೇಲೆ ಭಾರತ ಸ್ವಾತಂತ್ರ್ಯ ಚಳುವಳಿಯ ನಾಯಕರಾದರು. ೩೩ ವರ್ಷಗಳ ಕಾಲ ಭಾರತ ಸ್ವಾತಂತ್ರ್ಯದ ಹೋರಾಟದೊಂದಿಗೆ ಅದರ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳ ನಿವಾರಣೆಯ ಬಗ್ಗೆಯೂ ಹೋರಾಡಿದರು. ಅವರ ಸ್ವಾತಂತ್ರ್ಯ ಚಳುವಳಿ ಬಹುಮುಖಿ ಉದ್ದೇಶ ಸಾಧನೆಗಳ ಚಳುವಳಿಯಾಗಿತ್ತು. ಅವರ ಆ ಚಳುವಳಿಯಲ್ಲಿ ರಾಷ್ಟ್ರದ ಮಹಾನ್ ನಾಯಕರ ಜೊತೆಗೆ ಜನಸಾಮಾನ್ಯರೂ ಭಾಗವಹಿಸುತ್ತಿದ್ದರು. ತಮ್ಮ ಕರೆಗೆ ದೊರೆಯುತ್ತಿರುವ ಸಕಾರಾತ್ಮಕ ಪ್ರತಿಕ್ರಿಯೆ ಹಾಗೂ ಅವರೆಲ್ಲರ ಸಕ್ರಿಯ ಪಾಲ್ಗೊಳ್ಳುವಿಕೆ ಗಾಂಧೀಯವರಲ್ಲಿ ತಾವು ೧೨೫ವರ್ಷ ಬದುಕಬೇಕೆಂಬ ಆಸೆಯನ್ನು ಹುಟ್ಟಿಸಿತು. ಆದರೆ ೧೯೪೮ರಲ್ಲಿಯ ಘಟನೆಗಳು ಮತ್ತು ದೇಶದ ಇಬ್ಭಾಗ ಅವರನ್ನು ಹತಾಶಗೊಳಿಸಿತು. ತಕ್ಷಣವೇ ಮರಣದ ಇಚ್ಛೆಯನ್ನು ಬಯಸಿದರು. ಗಾಂಧೀಯವರ ಕನಸಿನ ಭಾರತ ಪಾಶ್ಚಿಮಾತ್ಯ ರೀತಿಯ ರಾಜಕೀಯ ಸ್ವಾತಂತ್ರ್ಯಕ್ಕಿಂತ ಭಾರತದ ವೇದ ಸಂಸ್ಕೃತಿಯ ಸ್ವರಾಜ್ಯವನ್ನು ಹೊಂದಿತ್ತು. ಈ ಸ್ವರಾಜ್ಯದಲ್ಲಿ ಸ್ವ-ಆಡಳಿತ, ಸಂಯಮ ಮುಖ್ಯವಾಗಿರುತ್ತವೆ. ಸ್ವಾತಂತ್ರ್ಯವೆಂದರೆ ಎಲ್ಲ ಬಗೆಯ ನಿರ್ಬಂಧಗಳಿಂದ ಬಿಡುಗಡೆ ಎಂದು ಅರ್ಥೈಸಲಾಗುವ ಅರ್ಥ ಸ್ವರಾಜ್ಯಕ್ಕಿರುವುದಿಲ್ಲ. ಆದರೆ ಇಂದು ಸಂಯಮ ರಹಿತ ಸ್ವೇಚ್ಛಾಚಾರದ ಸ್ವಾತಂತ್ರ್ಯ ಭಾರತದಲ್ಲಿ ಬೇರುಬಿಟ್ಟಿದೆ. ದುರ್ದೈವವೆಂದರೆ ಈ ಸ್ವೇಚ್ಛಾಚಾರದ ಸ್ವಾತಂತ್ರ್ಯವನ್ನೇ ನಿಜವಾದ ಸ್ವರಾಜ್ಯವೆಂದು ಕಳೆದ ೬೩ವರ್ಷಳಿಂದ ವೈಭವಪೂರ್ವಕವಾಗಿ

ಆಚರಿಸಿಕೊಂಡು ಬಂದಿದ್ದೇವೆ! ಹಾಗೆ ಆಚರಿಸುವುದರ ಮೂಲಕ ದೇಶ ಗಾಂಧೀ ಕಲ್ಪನೆಯ ಸ್ವರಾಜ್ಯದಿಂದ ದೂರ ಹೋಗುವುದಕ್ಕೆ ಕಾರಣವಾಗಿದ್ದೇವೆ. ಗಾಂಧೀಜಿ ಭಾರತದ ಗ್ರಾಮಗಳ ಸಮಗ್ರ ಅಭಿವೃದ್ಧಿಗೆ ತುಂಬ ಮಹತ್ವ ಕೊಟ್ಟಿದ್ದರು. ಆದರೆ ಜಾಗತೀಕರಣದ ಹೆಸರಿನಲ್ಲಿ ಗ್ರಾಮಗಳ ಉಚ್ಚಾಟನೆಯಾಗುತ್ತಿದೆ. ಸ್ವಾತಂತ್ರ್ಯ ಬಂದಾಗ ಭಾರತದ ಜನಸಂಖ್ಯೆಯಲ್ಲಿ ನೂರಕ್ಕೆ ಎಂಭತ್ತರಷ್ಟು ಜನರು ಗ್ರಾಮಗಳಲ್ಲಿ ವಾಸಿಸುತ್ತಿದ್ದರೆ, ಈಗ ಆ ಸಂಖ್ಯೆ ನೂರಕ್ಕೆ ಅರವತ್ತರಷ್ಟು ಆಗಿದೆ. ಆದ್ದರಿಂದ ವ್ಯವಸಾಯ ಮಾಡುವವರ ಸಂಖ್ಯೆ ದಿನೇದಿನೇ ಕಡಿಮೆ ಆಗುತ್ತಿದೆ. ಜೊತೆಗೆ, ಕೃಷಿಗೆ ಆಧಾರವಾದ ಪಶುಸಂಪತ್ತು ಕೂಡ ಗಣನೀಯವಾಗಿ ಕಡಿಮೆಯಾಗುತ್ತಿದೆ. ಕೃಷಿ ತಜ್ಞರ ಸಮೀಕ್ಷೆಯ ಪ್ರಕಾರ ೨೦೧೫ರ ವೇಳೆಗೆ ನೂರಕ್ಕೆ ನಲವತ್ತರಷ್ಟು ರೈತರು ವ್ಯವಸಾಯ ಮಾಡುವುದನ್ನು ಶಾಶ್ವತವಾಗಿ ಬಿಡಲಿದ್ದಾರೆ. ಈ ಪೈಕಿ ತಮಿಳುನಾಡಿನಲ್ಲಿ ನೂರಕ್ಕೆ ಎಪ್ಪತ್ತರಷ್ಟು, ಪಂಜಾಬಿನಲ್ಲಿ ನೂರಕ್ಕೆ ಅರವತ್ತೈದರಷ್ಟು ರೈತರು ವ್ಯವಸಾಯ ಬಿಟ್ಟು ನಗರಗಳಿಗೆ ವಲಸೆ ಹೋಗುವರು. ರೈತರ ಈ ನಗರ ವಲಸೆ ವರ್ಷ ವರ್ಷಕ್ಕೂ ಹೆಚ್ಚಾಗಲಿದೆ; ನಗರ ಸಂಸ್ಕೃತಿ ಬೆಳೆಯಲಿದೆ. ಯಾವ ನಗರಗಳು 'ಪ್ಲೇಗ್' ಹುಟ್ಟಿಸುವ ತಾಣಗಳೆಂದು ಗಾಂಧೀ ಕರೆದಿದ್ದರೋ ಅಂಥ ನಗರಗಳ ನಿರ್ಮಾಣಕ್ಕೇ ಇಂದಿನ ಆಡಳಿತ ಒತ್ತುಕೊಡುತ್ತಿರುವುದರ ಮೂಲಕ ಗಾಂಧೀ ಕನಸಿನ ಭಾರತವನ್ನು ಹಾಳುಗೆಡುವುತ್ತಿದೆ.

ನಗರಗಳ ನಿರ್ಮಾಣಕ್ಕೆ ಮುಖ್ಯ ಕಾರಣ ಕೈಗಾರಿಕರಣದ ನೀತಿ. ಕೈಗಾರಿಕರಣದ ಈ ನೀತಿಯನ್ನು ಭಾರತ ಪಶ್ಚಿಮ ದೇಶಗಳಿಂದ ಆಮದು ಮಾಡಿಕೊಂಡಿದೆ ಇಲ್ಲವೆ ಆ ದೇಶಗಳ ಅಂಧಾನುಕರಣೆ ಮಾಡಿದೆ. ಪಾಶ್ಚಿಮಾತ್ಯ ರೀತಿಯ ಕೈಗಾರಿಕರಣ ಭಾರತಕ್ಕೆ ಅದರದೇ ಆದ ಸಾಂಸ್ಕೃತಿಕ, ಭೌಗೋಳಿಕ, ಜನಸಂಖ್ಯೆ ಇತ್ಯಾದಿಗಳ ಕಾರಣದಿಂದ ಸೂಕ್ತವಾಗುವುದಿಲ್ಲವೆಂದು ಗಾಂಧೀಜಿ ೧೯೨೦ರ ದಶಕಗಳಲ್ಲಿಯೇ ಅಂದರೆ ದೇಶಕ್ಕೆ ಸ್ವಾತಂತ್ರ್ಯ ಬರುವುದಕ್ಕೆ ಇಪ್ಪತ್ತೇಳು ವರ್ಷಗಳ ಮೊದಲೇ ಹೇಳಿದ್ದರು. ಪಾಶ್ಚಿಮಾತ್ಯ ಮಾದರಿಯ ಔದ್ಯೋಗಿಕರಣ ತೀರಲಾರದ ಭೌತಿಕ ಇಚ್ಛೆಯನ್ನು ಉಂಟುಮಾಡುವುದರ ಜೊತೆಗೆ ಯುದ್ಧಕ್ಕೂ ಪ್ರಚೋದನೆಯನ್ನು ಕೊಡುತ್ತದೆ. ಭಾರತ ಪ್ರಾಚೀನ ಕಾಲದಿಂದಲೂ ಕರ್ಮಭೂಮಿಯಾಗಿ ವಿಜೃಂಭಿಸಿದೆಯೇ ಹೊರತು ಭೋಗ ಭೂಮಿಯಾಗಿಯಲ್ಲ. ಇಂದು ಭಾರತ ಕೈಗೊಂಡಿರುವ ಕೈಗಾರಿಕಾ ಕ್ರಾಂತಿ ಭಾರತವನ್ನು ಹೆಚ್ಚು ಹೆಚ್ಚು ಭೋಗಭೂಮಿಯನ್ನಾಗಿ ಪರಿವರ್ತಿಸುತ್ತಿದೆ. ಕೈಗಾರಿಕಾಕರಣದಲ್ಲಿ ಒಳಗೊಂಡಿರುವ ನೀತಿ ಬೃಹತ್ ಉತ್ಪಾದನೆ. ಈ ಬೃಹತ್ ಉತ್ಪಾದನೆಯೇ ಜಾಗತಿಕ ದುರಂತಕ್ಕೆ ಕಾರಣವಾಗಿದೆ. ಎಲ್ಲ ರಾಷ್ಟ್ರಗಳಲ್ಲಿ ಆರ್ಥಿಕ ಹಿಂಜರಿತ ಉಂಟಾಗಿದೆ. ಅಮೇರಿಕಾದಂಥ ಅತಿ ಕೈಗಾರಿಕೃತ ದೇಶಗಳಲ್ಲೂ ನಿರುದ್ಯೋಗ ಸಮಸ್ಯೆ ಉಂಟಾಗಿದೆ. ಬ್ಯಾಂಕುಗಳು ದಿವಾಳಿ ಏಳುತ್ತಿವೆ. ದೇಶಗಳಲ್ಲಿ ಪರಸ್ಪರ ಪೈಪೋಟಿ ಉಂಟಾಗಿದೆ. ಇತಿಹಾಸದ ಪುಟಗಳಲ್ಲಿ ಕಳೆದು ಹೋಗಿದ್ದ ವಸಹಾತುಶಾಹಿ ಪುನಃ ತಲೆಯೆತ್ತಿದೆ. ಯೂರೋಪಿನಲ್ಲಿ ನಡೆದು ಹೋದಂಥ ಭೀಕರ ಯುದ್ಧಗಳು ಅಥವಾ ಆಂತರಿಕ ಕಾದಾಟಗಳು ಜಗತ್ತಿನ ಎಲ್ಲ ದೇಶಗಳ ಜೀವನ ಪದ್ಧತಿಯೇ ಆಗಿದೆ. ಎಲ್ಲೆಲ್ಲೂ ಭಯೋತ್ಪಾದನೆಯ ಪಿಡುಗು, ಎಲ್ಲೆಲ್ಲೂ ಹಿಂಸೆಯ ತಾಂಡವ.

ಪಾಶ್ಚಿಮಾತ್ಯ ಮಾದರಿಯ ಔದ್ಯೋಗಿಕರಣ ಭಾರತೀಯ ಸಂಸ್ಕೃತಿಯನ್ನು ಹಾಳುಮಾಡುತ್ತದೆ ಎಂಬುದು ಗಾಂಧೀಜಿಯವರ ದೂರದೃಷ್ಟಿಯಾಗಿತ್ತು. ಆ ದೃಷ್ಟಿ ಇಂದು ನಿಜವಾಗಿದೆ. ಭಾರತ ಇನ್ನೊಂದು ಅಮೇರಿಕ ಅಥವಾ ಇಂಗ್ಲೆಂಡ್ ಆಗಲು ಹೊರಟಿದೆ. ಇಲ್ಲಿಯ ಮಕ್ಕಳು ತಮ್ಮ ಭಾಷೆಯನ್ನು ಮರೆಯುತ್ತಿದ್ದಾರೆ. ಅದರ ಜೊತೆಗೆ ಭಾರತದ ಎಲ್ಲ ಸಾಂಸ್ಕೃತಿಕ ಮೌಲ್ಯಗಳನ್ನು ಪಲ್ಲಟಗೊಳಿಸುತ್ತಿದ್ದಾರೆ. ಈ ಎಲ್ಲ ಬೆಳವಣಿಗೆಗಳು ಗಾಂಧೀಯವರ ಕನಸಿನ ಭಾರತವನ್ನು ಹಾಳುಗೆಡಹುತ್ತಿವೆ.

ಭಾರತ ಇಡೀ ವಿಶ್ವದ ಒಳಿತಿಗಾಗಿ ಸ್ವ ಇಚ್ಛಾ ಪೂರ್ವಕವಾಗಿ ಮತ್ತು ಪರಿಶುದ್ಧ ತ್ಯಾಗಕ್ಕೆ ಸಿದ್ಧವಾಗಬೇಕೆಂದು ಗಾಂಧೀಜಿ ಬಯಸಿದ್ದರು. ಭಾರತದ ಸ್ವಾತಂತ್ರ್ಯ ಜಾಗತಿಕ ಶಾಂತಿ ಮತ್ತು ಯುದ್ಧದ ಬಗ್ಗೆ ಜಾಗತಿಕ ದೃಷ್ಟಿಕೋನವನ್ನೇ ಬದಲಾಯಿಸುವಂಥ ಕ್ರಾಂತಿ ಉಂಟುಮಾಡಬೇಕೆಂದೂ ಗಾಂಧೀಜಿ ಬಯಸಿದ್ದರು. ಆದರೆ ಇಂದು ಭಾರತ ತನ್ನಲ್ಲಿಯ ಅಗಾಧವಾದ ಶಸ್ತ್ರಾಸ್ತ್ರಗಳ ಸಂಗ್ರಹಣೆಯಿಂದ ಗಾಂಧೀ ಬಯಸಿದ್ದ ಆ ಕ್ರಾಂತಿಕಾರಿ ಪಾತ್ರಕ್ಕೆ ಬೇಕಾದ ನೈತಿಕಶಕ್ತಿಯನ್ನು ಕಳೆದುಕೊಂಡಿದೆ. ವಿಜ್ಞಾನವು ಮಾನವನ ಸೇವಕನಾಗಿ ಕೆಲಸಮಾಡಬೇಕೆಂದು ಗಾಂಧೀಜಿ ಬಯಸಿದ್ದರು. ಆದರೆ ಇಂದು ವಿಜ್ಞಾನ ಮಾನವನ ಮೇಲೆ ಸವಾರಿ ಮಾಡುತ್ತಿದೆ. ಇದಕ್ಕೆ ಭಾರತ ಹೊರತಾಗಿಲ್ಲ.

ನಾವು ಪ್ರಜಾಪ್ರಭುತ್ವ ಆಡಳಿತ ಪದ್ಧತಿಯನ್ನು ಇಟ್ಟುಕೊಂಡಿದ್ದೇವೆ. ಆದರೆ ಆ ಪ್ರಕಾರದ ಪ್ರಭುತ್ವಕ್ಕನುಸಾರ ಬೇಕಾದ ಸಾಮರ್ಥ್ಯ, ಮನೋಗುಣ ಇತ್ಯಾದಿಗಳನ್ನು ದೇಶದ ಜನರಲ್ಲಿ ಬೆಳಸಲು ವಿಫಲರಾಗಿದ್ದೇವೆ. ಪ್ರಜಾಪ್ರಭುತ್ವವೆಂಬುದು ದೊಡ್ಡ ವ್ಯವಸ್ಥೆ. ಆದ್ದರಿಂದ ಅದರ ದುರುಪಯೋಗವಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ. ಇದರ ಅರ್ಥ ಪ್ರಜಾಪ್ರಭುತ್ವವನ್ನು ಅಲ್ಲಗೆಳೆಯುವುದಲ್ಲ. ಬದಲಿಗೆ ಅದರ ದುರುಪಯೋಗವಾಗದಂತೆ ಪ್ರಜೆಗಳು ಜಾಗರೂಕತೆ ವಹಿಸಬೇಕು. ಅಲ್ಲದೆ, ಪ್ರಜಾಪ್ರಭುತ್ವವಾಗಲಿ, ಜನಸಾಮಾನ್ಯರ ಸ್ವರಾಜ್ಯವಾಗಲಿ ಅಸತ್ಯದ ಮಾರ್ಗ ಹಾಗೂ ಹಿಂಸಾಧಾರಿತ ಸಾಧನಗಳಿಂದ ಇರಲು ಸಾಧ್ಯವಿಲ್ಲ. ಯಾವುದೇ ಒಬ್ಬ ವ್ಯಕ್ತಿಯ ಸ್ವಾತಂತ್ರ್ಯದ ಪೂರ್ಣ ಉಪಯೋಗ ಶುದ್ಧ ಅಹಿಂಸೆಯ ಆಡಳಿತದಲ್ಲಿ ಮಾತ್ರ ಸಾಧ್ಯ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅತ್ಯಂತ ದುರ್ಬಲ ವ್ಯಕ್ತಿಗೂ ಬಲಿಷ್ಠ ವ್ಯಕ್ತಿಯಷ್ಟೇ ಅವಕಾಶವಿರಬೇಕು ಎಂದು ಗಾಂಧೀಜಿ ಸೂಚಿಸಿದ್ದರು. ಆದರೆ ನಮ್ಮೀ ಇಂದಿನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಸತ್ಯ ಮತ್ತು ಹಿಂಸೆ ಪ್ರಮುಖ ಶಕ್ತಿಗಳಾಗಿ ಹೊರಹೊಮ್ಮುತ್ತಿವೆ. ಭ್ರಷ್ಟಾಚಾರ ಅಸತ್ಯದ ಕರಾಳ ಮುಖವಾಗಿದೆ. ಬಡತನದ ನಿವಾರಣೆಯಾಗುವುದರ ಬದಲು ಅದು ಹೆಚ್ಚಾಗುತ್ತಿದೆ. ಯಾವ ಅಭಿವೃದ್ಧಿಯ ನೀತಿಯಿಂದ ದೇಶದ ಬಡತನ, ನಿರುದ್ಯೋಗ ಆರ್ಥಿಕ ಅಸಮಾನತೆ, ಪ್ರಾದೇಶಿಕ ವೈರುಧ್ಯ ಇತ್ಯಾದಿಗಳನ್ನು ನಿರ್ಮೂಲನ ಮಾಡಲು ಸರಕಾರ ಹೊರಟಿದೆಯೋ ಆ ಅಭಿವೃದ್ಧಿಯ ನೀತಿಯೇ ಎಲ್ಲ ಪ್ರಕಾರದ ಸಮಸ್ಯೆಗಳಿಗೆ ಕಾರಣವಾಗುತ್ತಿದೆ. ಆದಾಗ್ಯೂ ಸರಕಾರ ಆ ಅಭಿವೃದ್ಧಿಯ ನೀತಿಯನ್ನೇ ಇನ್ನಷ್ಟು ಬಲವಾಗಿ ಅನುಷ್ಠಾನಕ್ಕೆ ತರಲು ಪ್ರಯತ್ನಿಸುತ್ತಿದೆ. ಆ ಅಭಿವೃದ್ಧಿಯ ನೀತಿಯಿಂದಾಗಿ ದೇಶದ ಒಳಗೆ ಪರದೇಶಗಳ ಹಣದ ಹೊಳೆ ಹರಿಯುತ್ತಿದೆ. ದೇಶದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆಲ್ಲವೂ ಅಪಾರವಾದ ಸಾಲದ ಸುಳಿಯಲ್ಲಿ ಸಿಕ್ಕಿಕೊಂಡಿವೆ.

ಈಗಿರುವ ಸಾಲವನ್ನು ತೀರಿಸಲು ಹೊಸದೊಂದು ಸಾಲವನ್ನು ಮಾಡುತ್ತ ದೇಶದ ಅಭಿವೃದ್ಧಿಯನ್ನು ಸಾಧಿಸಲು ಪ್ರಯತ್ನಿಸುತ್ತಿರುವ ಸರ್ಕಾರದ ಆರ್ಥಿಕ ನೀತಿ ಗಾಂಧೀ ಪ್ರಣೀತ ನೀತಿಯ ದೃಷ್ಟಿಯಿಂದ ಮೂರ್ಖ ನೀತಿಯಾಗಿದೆ. ಜೊತೆಗೆ ಸರ್ಕಾರ ಸೈನ್ಯಕ್ಕಾಗಿ, ಯುದ್ಧಾಸ್ತ್ರಗಳಿಗಾಗಿ ತನ್ನ ಶಕ್ತಿಮೀರಿ ಖರ್ಚು ಮಾಡುತ್ತಿದೆ. ಅಭಿವೃದ್ಧಿ ನೀತಿಯ ಕಾರಣದಿಂದಾಗಿಯೇ ದೇಶದಾದ್ಯಂತ ಹಿಂಸೆ ಹೆಚ್ಚಾಗುತ್ತಿದೆ. ಈ ಹಿಂಸೆಯನ್ನು ಹತೋಟಿಯಲ್ಲಿಡಲು ಪೋಲಿಸ್ ಶಕ್ತಿಯನ್ನು ಬಳಸಲಾಗುತ್ತಿದೆ. ಒಂದೆಡೆ ಜನಹಿತಕ್ಕಾಗಿ ಅಭಿವೃದ್ಧಿಯೆಂದು ಹೇಳುತ್ತಾ ಇನ್ನೊಂದೆಡೆ ಜನತೆಯನ್ನು ಬಂದೂಕಿನ ಸಹಾಯದಿಂದ ಹೆದರಿಸುತ್ತಾ ಪ್ರಜಾಪ್ರಭುತ್ವವನ್ನು ನಡೆಸುತ್ತಿದೆ. ಇಂದಿನ ಚುನಾವಣೆಗಳೆಲ್ಲವೂ ಬಿಗಿ ಪೋಲಿಸ್ ಬಂದೋಬಸ್ತಿನಲ್ಲಿ ನಡೆಯುತ್ತಿವೆ. ನಂತರ ಚುನಾವಣೆಗಳು ಶಾಂತರೀತಿಯಲ್ಲಿ ನಡೆದವೆಂದು ಹೇಳಿಕೆ ಕೊಡಲಾಗುತ್ತದೆ.

ನ್ಯಾಯಾಂಗ ವ್ಯವಸ್ಥೆಯು ಕ್ರಮೇಣ ಜನರ ವಿಶ್ವಾಸವನ್ನು ಕಳೆದುಕೊಳ್ಳುತ್ತಿದೆ. ಎಷ್ಟೋ ಸಲ ನ್ಯಾಯಾಂಗ ಕಾರ್ಯಾಂಗದ ಕೆಲಸಮಾಡುತ್ತದೆ. ನ್ಯಾಯಾಂಗದಲ್ಲಿಯೂ ಭ್ರಷ್ಟತೆ ಹೆಚ್ಚಾಗಿದೆ. ಪ್ರಜಾಪ್ರಭುತ್ವದ ಮೂರು ಮುಖ್ಯ ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ತಮ್ಮ ತಮ್ಮ ಪ್ರಾಮುಖ್ಯತೆಯನ್ನು ಕಳೆದುಕೊಳ್ಳುತ್ತಿವೆ. ಇದರೊಂದಿಗೆ ನ್ಯಾಯಾಲಯದ ಅಂಗವಾದ ಪತ್ರಿಕೋದ್ಯಮವೂ ತನ್ನ ನೈತಿಕತೆಯನ್ನು ಕಳೆದುಕೊಂಡಿದೆ.

ಗಾಂಧೀಜಿಯವರು ಭಾರತದಲ್ಲಿ ವಿಶಿಷ್ಟವಾದ, ಆದರ್ಶವಾದ, ಶ್ರೇಷ್ಠವಾದ ಪ್ರಜಾಪ್ರಭುತ್ವವನ್ನು ಸ್ಥಾಪಿಸಲು ಬಯಸಿದ್ದರು. ಅಂತ್ಯೋದಯವನ್ನು ಸಾಧಿಸುತ್ತಾ ಸರ್ವೋದಯ ಸಮಾಜ ರಚನೆಯ ಕಡೆಗೆ ಗುರಿಯಿಟ್ಟಿದ್ದರು. ಆದರೆ ಇಂದು ಸಮಾಜದಲ್ಲಿ ದುರ್ಬಲರನ್ನು, ದಲಿತರನ್ನು ರೈತರನ್ನು ಗೋಡೆಗೆ ತಳ್ಳುತ್ತ ಪಾಶ್ಚಿಮಾತ್ಯ ಮಾದರಿಯ ಬಂಡವಾಳಶಾಹಿ ಪ್ರಜಾಪ್ರಭುತ್ವದ ರಚನೆಯ ಪ್ರಯತ್ನ ನಡೆಯುತ್ತಿದೆ.

ಗಾಂಧೀಜಿ ಭಾರತದಲ್ಲಿ ತರತಮಗಳ ವ್ಯವಸ್ಥೆ ಬೇಡವೆಂದಿದ್ದರು. ಈಗ ಆ ವ್ಯವಸ್ಥೆಯೇ ಬಲಗೊಳ್ಳುತ್ತಿದೆ. ಪಾಶ್ಚಿಮಾತ್ಯ ರೀತಿಯ ಆಡಳಿತ ವ್ಯವಸ್ಥೆ, ಕೈಗಾರಿಕಾ ನೀತಿ, ಶಿಕ್ಷಣ ನೀತಿ, ವಿದೇಶ ನೀತಿ ಇತ್ಯಾದಿಗಳು ಬೇಡ. ಅವು ಭಾರತದ ಪರಿಸ್ಥಿತಿಗೆ ಸುತರಾಂ ಒಗ್ಗುವುದಿಲ್ಲವೆಂದು ಖಡಾಖಂಡಿತವಾಗಿ ಹೇಳಿದ್ದರು. ಆದರೆ ದೇಶ ಪ್ರೀತ್ಯಾದರದಿಂದ ಅವುಗಳನ್ನೇ ಅಪ್ಪಿಕೊಳ್ಳುತ್ತಿದೆ.

ಇಂದು ಭಾರತದ ಜೀವನದ ಎಲ್ಲ ಕ್ಷೇತ್ರಗಳಲ್ಲಿ, ರಾಷ್ಟ್ರ ಜೀವನದ ಎಲ್ಲ ಕ್ಷೇತ್ರಗಳಲ್ಲಿ ಗಾಂಧೀ ವಿಚಾರಕ್ಕೆ ವೈರುಧ್ಯವಾದ ಜೀವನ ಪದ್ಧತಿಗಳನ್ನು ಅನುಸರಿಸಿಕೊಂಡು ಬರುವುದರ ಮೂಲಕ ಗಾಂಧೀಜಿಯವರ ಕನಸಿನ ಭಾರತವನ್ನು ಭಾರತೀಯರು ಹಾಳುಗೆಡಹುತ್ತಿದ್ದಾರೆ.

ಗಾಂಧೀಜಿಯವರ ಅರವತ್ತನೇ ಹುತಾತ್ಮ ವರ್ಷದ ನೆನಪಿನಿಂದಾಗಿಯಾದರೂ ಭಾರತ ತನ್ನ ಆತ್ಮ ವಿಮರ್ಶೆ ಮಾಡಿಕೊಂಡು ಗಾಂಧೀ ವಿಚಾರದ, ಗಾಂಧೀ ಸಿದ್ಧಾಂತದ ದಾರಿಯಲ್ಲಿ ನಡೆಯುವಂತಾಗಲೆಂಬುದೇ ಮನುಕುಲ ಪ್ರೀತಿಸುವ ಪ್ರತಿಯೋರ್ವನ ಪ್ರಾರ್ಥನೆಯಾಗಬೇಕು.

* * *

ಸತ್ಯನ್ ಮತ್ತು ಅವರ ಕ್ಯಾಮರಾ

– *ಎಚ್.ವೈ.ಶಾರದಾ ಪ್ರಸಾದ್*

ದೇಶದಲ್ಲಿ ಕೀರ್ತಿ ಸಂಪಾದಿಸಿದ ಅನೇಕರನ್ನು ಮೈಸೂರು ಮಹಾರಾಜ ಕಾಲೇಜಿನಲ್ಲಿ ಸಹಪಾಠಿಗಳಾಗಿ ಪಡೆಯುವ ಭಾಗ್ಯ ನನಗಿತ್ತು. ಅವರಲ್ಲಿ ಕೆಲವರು : ಭಾರತದ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾದ ಇ.ಎಸ್. ವೆಂಕಟರಾಮಯ್ಯನವರು; ವೀಣಾ ವಾದನದಲ್ಲಿ ಖ್ಯಾತಿಯನ್ನು ಪಡೆದ ವಿ.ದೊರೆಸ್ವಾಮಿ ಅಯ್ಯಂಗಾರ್ಯರು; ಕನ್ನಡದ ಶ್ರೇಷ್ಠ ಕವಿಗಳಲ್ಲೊಬ್ಬರಾದ ಎಂ.ಗೋಪಾಲಕೃಷ್ಣ ಅಡಿಗರು; ವ್ಯಂಗ್ಯಚಿತ್ರ ಕ್ಷೇತ್ರದಲ್ಲಿ ದೊಡ್ಡ ಹೆಸರು ಮಾಡಿದ ಆರ್.ಕೆ.ಲಕ್ಷ್ಮಣ್; ಇನ್ನೊಬ್ಬರೆಂದರೆ ಇವರಿಗೆ ಉಜ್ವಲವಾದ ಭವಿಷ್ಯವಿದೆ ಎಂದು ಆಗಲೇ ಎಲ್ಲರೂ ಭಾವಿಸಿದ್ದ ಟಿ.ಎಸ್.ಸತ್ಯನ್. ಕ್ಯಾಮರಾ ಹಿಡಿದು ಮಂದಹಾಸ ಬೀರುತ್ತಿದ್ದ ಸತ್ಯನ್ ಆಗಲೇ ಎಲ್ಲರಿಗೂ ಪರಿಚಿತರಾಗಿದ್ದರು. ಲಕ್ಷ್ಮಣ್ ಅವರ ವ್ಯಂಗ್ಯ ಚಿತ್ರಗಳೂ ಸತ್ಯನ್ ತೆಗೆಯುತ್ತಿದ್ದ ಛಾಯಾಚಿತ್ರಗಳೂ ಮೈಸೂರು ವಿಶ್ವವಿದ್ಯಾನಿಲಯದ ಯೂನಿಯನ್ ಪತ್ರಿಕೆಯಲ್ಲಿ ಅಚ್ಚಾಗಿದ್ದುದು ಈಗಲೂ ನನ್ನ ನೆನಪಿನಲ್ಲಿ ಉಳಿದಿದೆ. ನಮ್ಮ ದೇಶದ ಛಾಯಾಗ್ರಾಹಕರಲ್ಲಿ ಅಗ್ರಪಂಕ್ತಿಗೆ ಸೇರಿದವರು ಸತ್ಯನ್. 'ಪದ್ಮಶ್ರೀ' ಪ್ರಶಸ್ತಿಯನ್ನು ನೀಡಿ ಭಾರತ ಸರ್ಕಾರ ಅವರನ್ನು ಗೌರವಿಸಿದೆ.

ಎರಡು ಮರದ ತುಂಡುಗಳು ಒಟ್ಟಿಗೆ ಒಂದು ನದಿಯಲ್ಲಿ ತೇಲುತ್ತಾಬಂದು, ಬೇರೆ ಬೇರೆಯಾಗಿ ತೇಲಿಹೋಗಿ ಮತ್ತೆ ಸೇರುವಂತೆ ಕೆಲವು ಸಮಕಾಲೀನರ ಸ್ಥಿತಿ. ನನ್ನ ಮತ್ತು ಸತ್ಯನ್ ವಿಷಯದಲ್ಲಿ ಹಾಗಾಗಲಿಲ್ಲ. ಅದೃಷ್ಟವಶಾತ್ ಈ ಅರವತ್ತು ವರ್ಷಗಳಲ್ಲಿ ನಾವಿಬ್ಬರೂ ಸಮೀಪವರ್ತಿಗಳೇ ಆಗಿದ್ದೇವೆ. ಮುಂಬೈಯಲ್ಲಿ ಒಂದು ವರ್ಷ ನಾವಿಬ್ಬರೂ ಒಂದೇ ಕೊಠಡಿಯಲ್ಲಿ ವಾಸಿಸುತ್ತಿದ್ದೆವು. ಜನಪ್ರಿಯವಾಗಿದ್ದ 'ಇಲ್ಲಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾ'ದಲ್ಲಿ ಆತ, 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯಲ್ಲಿ ನಾನು ಕೆಲಸ ಮಾಡುತ್ತಿದ್ದೆವು. ಆಮೇಲೆ ಇಬ್ಬರೂ ದೆಹಲಿ ಸೇರಿಕೊಂಡೆವು. ಮೂವತ್ತು ವರ್ಷಗಳಷ್ಟು ಕಾಲ ಹತ್ತಿರದಲ್ಲೇ ವಾಸಿಸುತ್ತಿದ್ದೆವು. ವಾರದಲ್ಲಿ ಎಷ್ಟೋ ಸಲ ಭೇಟಿಯಾಗುತ್ತಿದ್ದೆವು. ಕರ್ನಾಟಕವನ್ನು ಕುರಿತ ಒಂದು ಪುಸ್ತಕದಲ್ಲಿ ನಮ್ಮಿಬ್ಬರ ಪಾಲೂ ಇದೆ; ಚಿತ್ರಗಳು ಅವರದ್ದು, ಬರಹ ನನ್ನದ್ದು.

ಇಷ್ಟು ನಿಕಟವಾಗಿ ಇದ್ದುದ್ದರಿಂದ ಸತ್ಯನ್‌ರ ಕಾರ್ಯವಿಧಾನವನ್ನು ನೋಡುವುದು ನನಗೆ ಸಾಧ್ಯವಾಯಿತು. ಯಾವುದಾದರೂ ಒಂದು ಸನ್ನಿವೇಶದ ಚಿತ್ರೀಕರಣದ ಸಾಧ್ಯತೆಯನ್ನು ಅವರ ಕಣ್ಣುಗಳು ಮತ್ತು ಮನಸ್ಸು ಎಷ್ಟು ಬೇಗ ಅಂದಾಜು ಮಾಡುತ್ತಿದ್ದವು ಎಂಬುವುದನ್ನು ನೋಡಿ ಆಶ್ಚರ್ಯಚಕಿತನಾಗಿದ್ದೇನೆ. ಅವರಿಗೇ ವಿಶಿಷ್ಟವಾದ ಸಹಜತೆ, ಮುಕ್ತತೆ ಮತ್ತು ಜೀವನಪ್ರೇಮಗಳ ಮುದ್ರೆ ಅವರ ಚಿತ್ರಗಳ ಮೇಲೆ ಬಿದ್ದೇ ಬೀಳುತ್ತಿದ್ದವು. ಕ್ಯಾಮರಾ ಯಾವ ನಿಲುವಿನಲ್ಲಿ ಇರಬೇಕು, ಷಟರ್‌ಗಳ ವೇಗ ಎಷ್ಟಿರಬೇಕು, ಯಾವ ಲೆನ್ಸ್ ಬಳಸಬೇಕು ಎಂದು ಗಂಟೆಗಟ್ಟಲೆ

ಯೋಚಿಸುವ ಫೋಟೋಗ್ರಾಫರ್‌ಗಳ ಗುಂಪಿಗೆ ಸೇರಿದವರಲ್ಲ ಸತ್ಯನ್. ಅವರ ಬುದ್ಧಿ ಮಿಂಚಿನವೇಗದಲ್ಲಿ ಚಲಿಸುತ್ತದೆ. ಅವರ ಕಣ್ಣು ಕ್ಯಾಮರಾ ಕಣ್ಣು ಕಾಣುವುದಕ್ಕಿಂತ ಹೆಚ್ಚಿನದನ್ನು ಗಮನಿಸುತ್ತದೆ. ಈ ವಿಷಯದಲ್ಲಿ ಅವರು ಚಿತ್ರ ರಚನೆಯ ನಿಲುವು ಸ್ಟಾಂಡನ್ನು ಸರಿಯಾಗಿ ಜೋಡಿಸಿಟ್ಟುಕೊಳ್ಳಲು ಬೇಕಾದಷ್ಟು ಸಮಯ ಇರುವ ಚಿತ್ರಕಾರನಂತೆ ಅಲ್ಲ; ತನ್ನ ಕಡೆಗೆ ಬೌಲ್ ಮಾಡಿದ ಪ್ರತಿಯೊಂದು ಚೆಂಡನ್ನೂ ಬ್ಯಾಟ್ ಮಾಡಲು ಸಿದ್ಧನಾಗಿರುವ ಚತುರನಾದ ಬ್ಯಾಟ್ಸ್‌ಮನ್‌ನಂತೆ. ಪರಿಣಾಮವಾಗಿ, ಅವರ ಕಲೆ, ಅವರ ಪ್ರಯತ್ನದ ಹಿಂದೆ ಇರುವ ಶ್ರಮವನ್ನು ಮರೆಮಾಡಿ, ಅನಾಯಾಸವಾಗಿ ಮೂಡಿಬಂದಿದೆ – ಎಂಬ ಭಾವನೆ ಬರುವಂತೆ ಮಾಡುತ್ತದೆ. ಅವರು ಚಿತ್ರದ ಮೂಲಕ ತಿಳಿಸಬೇಕಾದದ್ದು ತಕ್ಷಣವೇ ತಿಳಿದುಹೋಗುತ್ತದೆ. ಅವರು ಹೊಸದೊಂದನ್ನು ಕಂಡು ಹಿಡಿದವರಂತೆ ಮಾಡುತ್ತಾರೆಯೇ ಹೊರತು ಯಾವುದನ್ನೇ ದಾಖಲು ಮಾಡಿದವರಂತೆ ಅಲ್ಲ.

ಸತ್ಯನ್ ಆರಂಭಕ್ಕೆ ಶಾಲಾ ಮಾಸ್ತರಾಗಿದ್ದರು. ಆದರೆ ಬಹುಬೇಗ ಅವರು ಕ್ಯಾಮರಾ ಚಾಲನೆಯೇ ತಮ್ಮ ವೃತ್ತಿ ಎಂಬುವುದನ್ನು ಕಂಡುಕೊಂಡರು. ಬೆಂಗಳೂರಿನ 'ಡೆಕ್ಕನ್ ಹೆರಾಲ್ಡ್' ಪತ್ರಿಕೆಯ ಫೋಟೋ ವರದಿಗಾರರಾಗಿ ಎರಡು ವರ್ಷ ಕೆಲಸಮಾಡಿದರು. ಆದರೆ ಸಾಮಾನ್ಯವಾದ ನೀರಸ ದೈನಂದಿನ ಚಟುವಟಿಕೆಗಳು ತಮಗೆ ಬಂಧನವಾಗಬಾರದು ಎಂಬುವುದನ್ನು ಕಂಡುಕೊಂಡರು. ನೂತನವೂ ಸೃಜನಶೀಲವೂ ಆದ ಚಿತ್ರವಾರ್ತೆಗಳ ಮೂಲಕ ಸ್ವದೇಶ ವಿದೇಶಗಳ ಪತ್ರಿಕಾ ಸಂಪಾದಕರುಗಳ ಗಮನವನ್ನು ಸೆಳೆದರು. ಅವರ ವಾರ್ತಾ ವರದಿಗಳು ಸುಸ್ಪಷ್ಟ ದೃಶ್ಯಗಳಾಗಿದ್ದುದು ಮಾತ್ರವಲ್ಲದೆ ಮಾನವೀಯತೆ ಮತ್ತು ಹಾಸ್ಯಗಳ ಸ್ಪರ್ಶದಿಂದ ರಂಜಿಸುತ್ತಿದ್ದವು.

Feature writer ಎನಿಸಿಕೊಂಡಿರುವ, ಚಿತ್ರ–ವರದಿಗಾರ ಎರಡು ಉಪಕರಣಗಳ ನೆರವು ಪಡೆಯುತ್ತಾನೆ – ಟೈಪ್‌ರೈಟರ್ ಮತ್ತು ಕ್ಯಾಮರಾ. ಸತ್ಯನ್ ಎರಡೂ ಉಪಕರಣಗಳನ್ನು ಲೀಲಾಜಾಲವಾಗಿ ಬಳಸಬಲ್ಲವರು. 'ಇಲ್ಲಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾ'ದಲ್ಲಿ ಪ್ರಕಟವಾದ ಅವರ ಚಿತ್ರಗಳು, ನ್ಯೂಯಾರ್ಕ್‌ನ 'ಬ್ಲಾಕ್ ಸ್ಟಾರ್ ಪಬ್ಲಿಷಿಂಗ್ ಕಂಪನಿ'ಯ ಮೂಲಕ ಬಿಡುಗಡೆಯಾದ ಅವರ ಸೃಜನಶೀಲ ಚಿತ್ರವರದಿಗಳು – ಇವನ್ನು ನೋಡಿದರೆ ಸತ್ಯನ್ ಶ್ರೇಷ್ಠತಮ ಅಂತರರಾಷ್ಟ್ರೀಯ ಚಿತ್ರ ಪ್ರಬಂಧಕಾರರ ಸಾಲಿಗೆ ಸೇರುತ್ತಾರೆ ಎಂಬ ಮಾತನ್ನು ಯಾರೂ ಒಪ್ಪುತ್ತಾರೆ.

ಪ್ರತಿಯೊಂದು ಛಾಯಾಚಿತ್ರವೂ ಯಾವುದಾದರೊಂದು ಘಟನೆಯ, ಒಂದು ಸ್ಥಳದ ಅಥವಾ ಒಬ್ಬ ವ್ಯಕ್ತಿಯ ಚಿತ್ರ ಅಥವಾ ಪ್ರತಿಬಿಂಬ ಮಾತ್ರವಲ್ಲ; ಕಾಲಾನುಕ್ರಮದಲ್ಲಿ ಅದೊಂದು ಐತಿಹಾಸಿಕ ದಾಖಲೆಯೂ ಆಗಬಲ್ಲದು. ಉತ್ತಮತರ ಛಾಯಾಗ್ರಹಣ ಎಂದಿಗೂ ಗತಕಾಲದ ವಸ್ತುವಾಗುವುದಿಲ್ಲ. ಅದು ತನ್ನದೇ ಆದ ಒಂದು ಬದುಕನ್ನು ಪಡೆದುಕೊಳ್ಳುತ್ತದೆ; ನಿತ್ಯನೂತನವಾಗಿ ಸುಸಂಬದ್ಧವಾಗಿ ಉಳಿಯುತ್ತದೆ.

ಅಂತಹ ಅನೇಕ ಚಿತ್ರಗಳನ್ನು ಸತ್ಯನ್ ನಮಗೆ ಕೊಟ್ಟಿದ್ದಾರೆ. ಪಾರ್ಲಿಮೆಂಟ್ ಭವನದ ಕೈಸಾಲೆಯಲ್ಲಿ ಅವರು ತೆಗೆದ ಜವಹರಲಾಲರ ಚಿತ್ರ ನನಗೆ ನೆನಪಾಗುತ್ತಿದೆ. ಅವರು ತೆಗೆದಿರುವ ಪ್ರಖ್ಯಾತರ ಚಿತ್ರಗಳಿಗಿಂತ ಹೆಚ್ಚಾಗಿ ಅವರು ತೆಗೆದಿರುವ

ಅನಾಮಧೇಯರ – ಹಳ್ಳಿಯ ಶಾಲಾ ಬಾಲಕ, ಕಳಕಳಿಯನ್ನು ತೋರಿಸುತ್ತಿರುವ ತಾಯಿ, ತಾನು ಧರಿಸಿರುವ ಒಡವೆಗಳ ಪ್ರಭೆಯನ್ನು ಮೀರಿಸುತ್ತಿರುವ ಕಣ್ಣಿನ ಬೆಳಕನ್ನು ಬೀರುತ್ತಿರುವ ಗುಳಿಕೆನ್ನೆಯ ಮುಗ್ಧ ಹುಡುಗಿ, ಇಂಥವರ – ಚಿತ್ರಗಳಲ್ಲಿ ಸತ್ಯನ್ ಅವರ ಪ್ರತಿಭೆ, ಸಹಾನುಭೂತಿಗಳು ಮಿಂಚಿ ಬೆಳಗುತ್ತಿವೆ.

ಸತ್ಯನ್ ವಾರ್ತಾಚಿತ್ರಗಳನ್ನು, ಭೂದೃಶ್ಯಗಳನ್ನು, ಶಿಲ್ಪಕಲಾ ವೈಭವಗಳ ಚಿತ್ರಗಳನ್ನು ಯಥೇಚ್ಚವಾಗಿ ನಮಗೆ ನೀಡಿದ್ದಾರೆ. ಆದರೆ ಅವರ ಪ್ರೀತಿಯ ಚಿತ್ರವಸ್ತು ಎಂದರೆ ಜನರು, ಅದರಲ್ಲೂ ಮಕ್ಕಳು. ೧೯೭೯ರಲ್ಲಿ 'ಮಗುವಿನ ಅಂತರರಾಷ್ಟ್ರೀಯ ವರ್ಷ'ದ ಆಚರಣೆಯ ಸಂದರ್ಭದಲ್ಲಿ ವಿಶ್ವಸಂಸ್ಥೆ ನ್ಯೂಯಾರ್ಕಿನ ತನ್ನ ಕೇಂದ್ರ ಕಟ್ಟಡದಲ್ಲಿ ಸತ್ಯನ್ ಅವರು ತೆಗೆದ ಮಕ್ಕಳ ಹಾಗೂ ಹುಡುಗರ ಚಿತ್ರಗಳ ಪ್ರದರ್ಶನವನ್ನು ಏರ್ಪಡಿಸುವ ಮೂಲಕ ಅವರ ಚಿತ್ರ ಪ್ರತಿಭೆಗೆ ಗೌರವತೋರಿಸಿದ್ದರಲ್ಲಿ ಏನೇನೂ ಆಶ್ಚರ್ಯವಿಲ್ಲ. ತಮ್ಮ ಎಂಭತ್ತನೆಯ ವಯಸ್ಸಿನಲ್ಲೂ ತಾರುಣ್ಯವನ್ನು ಚಿಮ್ಮಿಸುತ್ತಾ ಅವರು ಸೃಜನಶೀಲರಾಗಿ ಉಳಿಯುವಂತೆ ಮಾಡಿರುವುದು ಅವರಿಗೆ ವರವಾಗಿ ದೊರೆತಿರುವ ಸಹಾನುಭೂತಿ ಎಂಬುದು.

ಸತ್ಯನ್ ಅವರ ಚಿತ್ರಗಳನ್ನು ಕುರಿತು ನಾನು ಹೇಳಬೇಕಾದದ್ದು ಇಲ್ಲಿಗೆ ಮುಗಿದಿತ್ತು. ಆದರೆ ಇತ್ತೀಚಿನ ಅವರ ಒಂದು ಸಾಹಿತ್ಯಕ ಸಾಹಸ ಇನ್ನೂ ನಾಲ್ಕಾರು ಪಂಕ್ತಿಗಳನ್ನು ನಾನು ಸಂತೋಷದಿಂದ ಸೇರಿಸುವಂತೆ ಮಾಡಿದೆ. ಅದು ಸತ್ಯನ್ ಪ್ರಕಟಿಸುತ್ತಿರುವ ತಮ್ಮ ಪ್ರಬಂಧಗಳ ಸಂಕಲನ. ಅವರ ಸಾಹಿತ್ಯಶಕ್ತಿಯನ್ನು ಈಗಾಗಲೇ ನಾನು ಪ್ರಸ್ತಾಪಿಸಿದ್ದೇನೆ. ಆದರೆ ಅದನ್ನು ಇನ್ನೂ ಉಜ್ವಲವಾದ ಮಾತುಗಳಲ್ಲಿ ಬೆಳಗಿ ತೋರಿಸಬೇಕಾದ ಅವಕಾಶವನ್ನು ಅವರು ಕಲ್ಪಿಸಿದ್ದಾರೆ. ಅವರ ಚಿತ್ರಗಳು ಮೂಕ ಸಾಕ್ಷಿಗಳಲ್ಲ; ತಾವು ಹೇಳಬೇಕಾದುದ್ದನ್ನೆಲ್ಲಾ ಅವು ಕಾವ್ಯಮಯವಾಗಿ ಸೂಚಿಸುವಂಥವು, ನಿಜ. ಆದರೆ ಅವರ ಚಿತ್ರಗಳಿಗೆ ವಾಗ್ದೇವಿಯ ಕೃಪೆಯ ಸ್ಪರ್ಶವೂ ದೊರೆತು ಅವು ವಾಗ್ಮಿಗಳಾದಂತೆ ಭಾಸವಾಗುವ ಲೇಖನಗಳನ್ನು ಅವರು ಬರೆದಿದ್ದಾರೆ.

ಸರಳ ಸುಂದರ ಇಂಗ್ಲಿಷ್‌ನಲ್ಲಿ ಅವರು ಬರೆದ ಪ್ರಬಂಧಗಳನ್ನು ಈಗ ಕನ್ನಡಕ್ಕೆ ಅನುವಾದಿಸಿ ಪ್ರಕಟಿಸುತ್ತಿದ್ದಾರೆ. ಅದಕ್ಕೆ ಕಾರಣ, ಅವರ ಕನ್ನಡ ಪ್ರೇಮ. ತಾವು ಹುಟ್ಟಿ, ಬಾಲ್ಯವನ್ನು ಕಳೆದ, ಅವರ ವಿಶ್ರಾಂತ ಜೀವನದ ತೂಗುಯ್ಯಾಲೆಯಾಗಿರುವ ಕನ್ನಡ ನಾಡಿನ ಮೇಲೆ ಅವರಿಗಿರುವ ಪ್ರೀತಿ ಅವರು ತಮ್ಮ ಪ್ರಬಂಧಗಳನ್ನು ಮೊದಲಿಗೆ ಕನ್ನಡದಲ್ಲಿ ಪ್ರಕಟಿಸಲು ಪ್ರೇರೇಪಿಸಿದೆ. ಇದನ್ನು ಈಗಾಗಲೇ ಹಸ್ತಪ್ರತಿಯಲ್ಲಿ ಓದಿರುವ ಮಿತ್ರರ ಪ್ರಕಾರ ಇದು ಕನ್ನಡ ತಾಯಿಗೆ ಅವರು ಅರ್ಪಿಸುತ್ತಿರುವ ಅಮೂಲ್ಯಗ್ರಂಥ.

ಅನೇಕ ಮಹಾನ್ ಮತ್ತು ಸಾಮಾನ್ಯ ಘಟನೆಗಳು, ಶ್ರೀ ಸಾಮಾನ್ಯರ ಮೇಲೆ ಅವರಿಗಿರುವ ವ್ಯಾಮೋಹ ಎನ್ನುವಷ್ಟರ ಮಟ್ಟಿಗೆ ಪ್ರೀತಿಯಿಂದ ಮೂಡಿದ ಚಿತ್ರಗಳು, ಜಗತ್ತನ್ನು ಅನೇಕ ಬಾರಿ ಸುತ್ತಿ ಬಂದಿರುವ ಅವರ ಅನುಭವದ ಗಣಿಯ ವಜ್ರಗಳು ಈ ಎಲ್ಲವೂ ಸುಂದರವಾದ ಶಬ್ದಚಿತ್ರಗಳಾಗಿವೆ. ಇಂಥದೊಂದು ಪುಸ್ತಕವನ್ನು ರಚಿಸಿ ಅಪೂರ್ವವಾದ ಒಂದು ಕ್ಷೇತ್ರದ ಪರಿಚಯವನ್ನು ಮಾಡಿಕೊಟ್ಟಿರುವ ನನ್ನ ಪ್ರಿಯ ಮಿತ್ರ ಸತ್ಯನ್ ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸಿ ಅವರಿಗೆ ಶುಭಕೋರುತ್ತೇನೆ.

(ಸಾಭಾರ : ಕಾಲಕ್ಕೆ ಕನ್ನಡಿ – ಟಿ.ಎಸ್.ಸತ್ಯನ್)

* * *

ಸರ್ ಸಿ.ವಿ.ರಾಮನ್‌ರೊಂದಿಗೆ ಒಂದು ನಿಮಿಷ

– ಇ.ಪಿ.ಮೆನನ್

೧೯೫೭ರ ಚಳಿಗಾಲ. ನನ್ನ ಜೀವನದಲ್ಲಿಯೇ ಮೊಟ್ಟ ಮೊದಲಬಾರಿಗೆ ಬೆಂಗಳೂರಿಗೆ ಬಂದ ಕೂಡಲೆ ಸಿ.ವಿ.ರಾಮನ್‌ರವರನ್ನು ಭೇಟಿ ಮಾಡಬೇಕೆಂಬ ಮಹದಾಸೆಯಿತ್ತು. ನಾನು ಶಾಲೆಯಲ್ಲಿದ್ದಾಗ ಅವರು ನನ್ನ ನಾಯಕರಾಗಿದ್ದರು. ಡಿಸೆಂಬರ್ ತಿಂಗಳ ಚಳಿಗಾಲದ ಒಂದು ಬೆಳಿಗ್ಗೆ ನಾನು ರಾಮನ್ ಇನ್‌ಸ್ಟಿಟ್ಯೂಟ್‌ಗೆ ಫೋನ್ ಮಾಡಿದೆ. "ಹೌದು, ಇದು ರಾಮನ್ ಇನ್‌ಸ್ಟಿಟ್ಯೂಟ್ ಎಂದು ಅವರ ಕಾರ್ಯದರ್ಶಿಯ ಮೆಲುದನಿ ಕೇಳಿತು.

"ಪ್ರೊ.ರಾಮನ್‌ರವರನ್ನು ಕೆಲ ನಿಮಿಷಗಳ ಕಾಲ ಭೇಟಿಮಾಡಲು ಬಯಸಿದ್ದೇನೆ" ಎಂದು ನಾನು ಹೇಳಿದೆ.

"ವಿಶೇಷವೇನಾದರೂ ಇದೆಯೇ?"

"ಇಲ್ಲ. ಅವರಿಗೆ ನಮಸ್ಕಾರ ಹೇಳಿ ಗೌರವ ಸಲ್ಲಿಸಬೇಕೆಂದಿದ್ದೇನೆ."

"ದಯಮಾಡಿ ಇರಿ. ನಾನು ಅವರ ಬಿಡುವನ್ನು ನೋಡುತ್ತೇನೆ,"

ಒಂದು ನಿಮಿಷದ ನಂತರ ಅವಳೆಂದಳು: "ಆಗಲಿ ಶ್ರೀ ಮೆನನ್, ರಾಮನ್‌ರವರು ನಿಮ್ಮನ್ನು ಕೇವಲ ಒಂದು ನಿಮಿಷ ಭೇಟಿ ಮಾಡುವರು. ಕೇವಲ ಒಂದು ನಿಮಿಷ, ಜಾಗರೂಕರಾಗಿರಿ, ಅವರು ಸಮಯದ ಬಗ್ಗೆ ತುಂಬಾ ಗಮನವೀಯುತ್ತಾರೆ."

"ತುಂಬಾ ಸಂತೋಷ, ನಿಮಗೆ ವಂದನೆ. ನನಗೆ ಒಂದು ನಿಮಿಷ ಸಾಕು."

ಎರಡು ದಿವಸಗಳ ನಂತರ ನನ್ನ ಭೇಟಿಯಿತ್ತು. ಸರಿಯಾಗಿ ಬೆಳಿಗ್ಗೆ ಹನ್ನೊಂದು ಘಂಟೆಗೆ ಇನ್‌ಸ್ಟಿಟ್ಯೂಟ್‌ನಲ್ಲಿ ಇರಬೇಕೆಂದು ತೀರ್ಮಾನಿಸಿದೆ.

ನಾನು ಪ್ರವೇಶ ಮಾಡಿದಾಗ ಆ ಯುವತಿ ನನ್ನನ್ನು ಸಂದರ್ಶಕರ ಕೊಠಡಿಯಲ್ಲಿಯ ಕುರ್ಚಿಯ ಕಡೆಗೆ ಹಾರ್ದಿಕವಾಗಿ ಸ್ವಾಗತಿಸಿದಳು.

"ಆಯಿತು, ಈಗ ನೀವು ಒಳಗೆ ಹೋಗಬಹುದು, ಸರ್ ನಿಮ್ಮನ್ನು ನಿರೀಕ್ಷಿಸುತ್ತಿದ್ದಾರೆ."

ಹನ್ನೊಂದಕ್ಕೆ ಐದು ಕ್ಷಣ ಇರುವಾಗ ನಾನು ಬಾಗಿಲನ್ನು ತಟ್ಟಿದೆ, ನಿಧಾನವಾಗಿ ತಳ್ಳಿದೆ, ಒಳಗೆ ಹೋದೆ. ಎದುರಿನಲ್ಲಿ ಒಂದು ದೊಡ್ಡ ಮೇಜು ಇತ್ತು. ಅದರ ಮೇಲೆ ಕೆಲವು ಫೈಲ್ಸ್, ಕೆಲವು ಪುಸ್ತಕಗಳು ಮತ್ತು ವಿವಿಧ ಬಣ್ಣದ ಕೆಲವು ಕಲ್ಲುಗಳಿದ್ದವು.

"ಗುಡ್‌ಮಾರ್ನಿಂಗ್" ಎಂದು ನಾನು ಹೇಳಿದ್ದನ್ನು ಕೇಳಿ ಅವರು ತಮ್ಮ

ತಲೆಯೆತ್ತಿದರು. ನನ್ನ ಕಡೆ ಮುಗುಳ್ನಗೆ ಬೀರಿದರು ಮತ್ತು ನನಗೂ "ಗುಡ್‌ಮಾರ್ನಿಂಗ್" ಹೇಳಿದರು. ನಾನು ಅವರ ಟೇಬಲ್ ಬಳಿ ಹೋದೆ. ಕೈಮುಗಿದು ಮೌನವಾಗಿ ನಿಂತೆ. ಅವರ ಪ್ರಶ್ನೆ, "ನೀನು ಏನು ಮಾಡುತ್ತೀಯೆ? ವಿದ್ಯಾಭ್ಯಾಸ ಮುಗಿಸಿದ್ದಿಯೋ?"

"ಹೌದು, ಮುಗಿಸಿದ್ದೇನೆ; ಈಗ ಗಾಂಧೀನಗರದಲ್ಲಿರುವ ದಕ್ಷಿಣ ಭಾರತ ಸರ್ವಸೇವಾ ಸಂಘದಲ್ಲಿ ಕೆಲಸಮಾಡುತ್ತಿದ್ದೇನೆ." ನಾನು ಇನ್ನೂ ನಿಂತೇಯಿದ್ದೆ. ನನ್ನ ಕಣ್ಣುಗಳು ಗೋಡೆ ಗಡಿಯಾರದ ಮೇಲೆ ನೆಟ್ಟಿದ್ದವು.

"ತುಂಬಾ ಉಪಕಾರವಾಯಿತು, ಸಂತೋಷವಾಯಿತು."

"ವಕ್ಕಾರ್, ಅಯ್ಯಾ, ತರುಣನೇ ಎಂದು ಅವರು ತಮಿಳಿನಲ್ಲಿ ಮಾತನಾಡಿ ಕುರ್ಚಿಯ ಕಡೆ ಕೈತೋರಿಸಿದರು. ಯುವಕರಿಗಾಗಿ ನನ್ನ ಬಳಿ ಬಹಳಷ್ಟು ಸಮಯವಿದೆ. ಅದರಲ್ಲೂ ಚಿಂತನಾಶೀಲ ಮತ್ತು ಕಷ್ಟ ಪಟ್ಟು ಕೆಲಸಮಾಡುವ ಯುವಕರಿಗಾಗಿ" ಹೀಗೆಂದು ಹೇಳುತ್ತಾ ಪ್ರೊ.ರಾಮನ್ ಕುರ್ಚಿಗೆ ಒರಗಿಕೊಂಡು ಕುಳಿತರು. ಈ ಮೂರು ಮಾತುಗಳ ಬಗ್ಗೆ ಅವರು ಕೊಟ್ಟ ಒತ್ತನ್ನು ನಾನು ಅರ್ಥಮಾಡಿಕೊಂಡೆ.

ತಕ್ಷಣ ಅವರು ಎದ್ದುನಿಂತು ನನ್ನ ಬಳಿಬಂದು "ಬಾ, ನಾವು ತೋಟಕ್ಕೆ ಹೋಗೋಣ, ನಾನೇನು ಮಾಡುತ್ತಿದ್ದೇನೆ ನಿನಗೆ ತೋರಿಸುತ್ತೇನೆ." ಅವರು ನನ್ನನ್ನು ತಮ್ಮ ವಿಶಾಲವಾದ ಗುಲಾಬಿ ತೋಟಕ್ಕೆ ಕರೆದುಕೊಂಡು ಹೋದರು. ಆ ವಿಸ್ತಾರವಾದ ಪ್ರದೇಶದಲ್ಲಿ ನೂರಾರು ಗಿಡಗಳು, ಸಾವಿರಾರು ಹೂಗಳು, ಬೇರೆಬೇರೆ ಆಕಾರ, ಬೇರೆ ಬೇರೆ ಬಣ್ಣಗಳು.

"ನನಗೆ ಬಣ್ಣಗಳ ಗೀಳು. ಪ್ರಕೃತಿಯ ಆಟ ಹೇಗೆ ಮತ್ತು ಏಕೆ ಎಂದು ಆಲೋಚಿಸುವುದನ್ನು ನಾನು ನಿಲ್ಲಿಸುವುದಿಲ್ಲ." ನಾವು ನಿಧಾನವಾಗಿ ಮುಂದಕ್ಕೆ ನಡೆದಂತೆ ಅವರು ಕೆಲವು ನಿರ್ದಿಷ್ಟ ಹೂಗಳ ಕಡೆ ಬೆರಳುಮಾಡಿ "ಬದುಕು ಇನ್ನೂ ಹೆಚ್ಚು ವರ್ಣಮಯವಾಗಿರಬೇಕು" ಎಂದು ಹೇಳಿದರು. "ಈಗಿನ ದಿನಗಳಲ್ಲಿ ಕೆಲವು ಯುವಕರು ನನ್ನ ಬಳಿ ದೂರುಗಳೊಂದಿಗೆ ಬರುತ್ತಾರೆ. ಸಾಕಷ್ಟು ಸೌಕರ್ಯಗಳಿಲ್ಲ, ಪ್ರಯೋಗಾಲಯದಲ್ಲಿ ಸಾಕಷ್ಟು ಬೆಳಕಿಲ್ಲ, ಇತ್ಯಾದಿ. ನಾನು ಕಲ್ಕತ್ತೆಯಲ್ಲಿ ನನ್ನ ಮುಖ್ಯ ಕೆಲಸವನ್ನು ಪ್ರಾರಂಭಿಸಿದ್ದನ್ನು ಯೋಚನೆ ಮಾಡು. ನಾನೊಂದು ಕೇವಲ ಹಳೆಯ ಸ್ಟೌವ್ ಮತ್ತು ಏಳು ಪ್ರನಾಳಗಳನ್ನು ಹೊಂದಿದ್ದೆ. ವಿವಿಧ ಬಗೆಯ ಪರಿಸ್ಥಿತಿಗಳಲ್ಲಿ ಬೆಳಕಿನ ವಿವಿಧ ಆಯಾಮಗಳ ಬಗ್ಗೆ ನಾನು ಹೋರಾಡುತ್ತಿದ್ದೆ. ನಾವು ನಮ್ಮ ಬುದ್ಧಿಯನ್ನು ಪೂರ್ಣವಾಗಿ ಉಪಯೋಗಿಸಿದರೆ ತಂತ್ರಜ್ಞಾನವು ಅಷ್ಟು ಮಹತ್ವದ್ದಲ್ಲ.

ನಂತರ ರಾಮನ್‌ರವರು ಭೂದಾನ ಆಂದೋಲನದಲ್ಲಿಯ ಕೆಲಸಗಳ ಬಗ್ಗೆ ವಿಚಾರಿಸಿದರು. ಅರ್ಧಗಂಟೆ ತರುವಾಯ ನಾವು ಅವರ ಆಫೀಸ್‌ಗೆ ಬಿಸಿ ಕಾಫಿ ಕುಡಿಯುವುಕ್ಕಾಗಿ ಹಿಂದಿರುಗಿದೆವು. ನನ್ನ ಮಟ್ಟಿಗೆ ಆ ಒಂದು ನಿಮಿಷ ಶಾಶ್ವತ ಸಂತೋಷದ ನಿಮಿಷವಾಯಿತು.

ನಾಲ್ಕು ವರ್ಷಗಳ ನಂತರ ಒಂದು ನಿಮಿಷ ಮಟ್ಟಿಗೆ ಅವರ ಆಶೀರ್ವಾದ ಪಡೆಯಲು ಹೋದೆ. ಅವರು ನನ್ನ ಸಾಹಸಿ ಯೋಜನೆ ಬಗ್ಗೆ ಕೇಳಿದರು, ಕಿಟಕಿಂ-ಯ ಮೂಲಕ ಹೊರಗಡೆಯ ಗುಲಾಬಿ ತೋಟದ ಕಡೆ ನೋಡುತ್ತಾ ಹೀಗೆಂದರು, "ಬಹು ಅದ್ಭುತವಾದ ವಿಚಾರ, ಯುವಕನೇ. ವಿಶ್ವದ ನಾಲ್ಕು ರಾಜಧಾನಿಗಳ ವರೆಗೆ

ನಡೆಯುವುದು, ಮತ್ತು ಅಣು ಅಸ್ತ್ರಗಳ ವಿರುದ್ಧ ಪ್ರತಿಭಟನೆ ಮಾಡುವುದು! ನಿನಗೆ ನಾನು ಎಲ್ಲಾ ಯಶಸ್ಸು ಕೋರುತ್ತೇನೆ.

ಯುದ್ಧ ಮತ್ತು ಧರ್ಮ ಬಹುದೊಡ್ಡ ಲಾಭಗಳಿಸುವ ವಿಷಯ ಎಂಬುದನ್ನು ನೆನಪಿನಲ್ಲಿಟ್ಟುಕೊ. ಯೂರೋಪಿನ ಇತಿಹಾಸದ ಪುಸ್ತಕಗಳನ್ನು ನೋಡು. ಪ್ರತಿಯೊಂದು ಪುಟ ಮನುಷ್ಯನ ರಕ್ತದಿಂದ ನೆನೆದಿದೆ. ಅಂಥವರಿಗೆ ನೀನೇನು ಹೇಳುವೆ?"

ನಾನು ಬ್ರಟ್ರ್ರಾಂಡ್ ರಸೆಲ್‌ರವರ ಜಾಗತಿಕ ಅಥವಾ ಏಕಪಕ್ಷೀಯ ನಿಃಶಸ್ತ್ರೀಕರಣದ ವಿಚಾರವನ್ನು ಒತ್ತಿಹೇಳುವೆ. ಸಂಪೂರ್ಣ ಮತ್ತು ನಿಃಶಸ್ತ್ರೀಕರಣದ ಬಗ್ಗೆ ನೆಹರೂರವರ ಕರೆಯನ್ನು ಅವರಿಗೆ ಜ್ಞಾಪಿಸುವೆ ಎಂದು ಉತ್ತರಿಸಿದೆ.

"ಒಳ್ಳೆಯದಾಗಲಿ, ಯುವಕರೊಂದಿಗೆ ಹೆಚ್ಚು ಸಮಯ ಕಳಿ. ಯುವಕರು ಉತ್ತಮ ವಿಶ್ವದ ಭರವಸೆ. ಸಾಮಾನ್ಯ ಜನರು ಹೇಗೆ ಜೀವಿಸುತ್ತಾರೆ ಎಂಬುದನ್ನೂ ಅಧ್ಯಯನ ಮಾಡು."

ಆ ದೊಡ್ಡ ಆತ್ಮದ ಬಗ್ಗೆ ಆಲೋಚಿಸಿದಾಗಲೆಲ್ಲಾ ನನ್ನ ಧಮನಿಗಳಲ್ಲಿ ರೋಮಾಂಚನವಾಗುತ್ತದೆ. ಓರ್ವ ಮಾನವನಾಗಿ ಇರುವುದಕ್ಕೆ ಒಂದು ಅಲೆಯನ್ನು ಚಲನಶೀಲಗೊಳಿಸುತ್ತದೆ.

– ಅನು : ಸುಕೌ

* * *

ಕನ್ನಡ ನನ್ನ ಪ್ರಾಣ

- ಸುಮತೀಂದ್ರ ನಾಡಿಗ

ನನ್ನ ತಾಯಿಯ ಪೂರ್ವಜರು ದೇಶಸ್ಥರು. ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ಬಂದವರು. ನನ್ನ ತಂದೆಯ ಪೂರ್ವಜರು ಅರವೇಲುವಿಯೋಗಿಗಳು. ಅವರು ಆಂಧ್ರದಿಂದ ಬಂದವರು. ಬಹಳ ದೀರ್ಘಕಾಲದ ಹಿಂದೆಯೇ ಮರಾಠಿ, ತೆಲಗು ಮರೆತು ಕನ್ನಡಿಗರಾಗಿದ್ದರು. ನಾನು ವಿದ್ಯಾರ್ಥಿದಿಶೆಯಲ್ಲಿ ಇಂಗ್ಲಿಷ್ ಮತ್ತು ಸಂಸ್ಕೃತ ಕಲಿತೆ. ಕಾಲೇಜ ಪ್ರವೇಶ ಮಾಡುವ ಹೊತ್ತಿಗೆ ಹಿಂದಿಯ ರಾಷ್ಟ್ರಭಾಷಾ ಪರೀಕ್ಷೆ ಮುಗಿಸಿದ್ದೆ. ಸಾಗರದಲ್ಲಿದ್ದಾಗ ಕನ್ನಡ ಕವಿತೆಗಳನ್ನು ಬರೆಯಲು ಪ್ರಾರಂಭಿಸುವ ಜೊತೆಗೆ ಕೈಬರಹದ ಪತ್ರಿಕೆ ಸಂಪಾದಿಸತೊಡಗಿದೆ. ಬಹುಷಃ ಆ ಪ್ರಯತ್ನ ಕವಿಯಾಗಬೇಕೆಂಬ ಆಸೆ ನನ್ನಲ್ಲಿ ಚಿಗುರಿಸಿತು. ಶಿವಮೊಗ್ಗದಲ್ಲಿ ಇಂಟರ್‌ಮೀಡಿಯಟ್ ಕಾಲೇಜಿನಲ್ಲಿ ಓದುತ್ತಿದ್ದಾಗ ಪ್ರೊಫೆಸರ್ ಪ್ರಭುಪ್ರಸಾದ್ ನನ್ನ ಕವಿತೆಗಳನ್ನು ಪ್ರೋಫೆಸರ್ ಜಿ.ಎಸ್.ಶಿವರುದ್ರಪ್ಪನವರಿಗೆ ಕಳುಹಿಸಿದರು. ಶಿವರುದ್ರಪ್ಪನವರು ಕೆಲವು ಟಿಪ್ಪಣಿಗಳೊಂದಿಗೆ ಉತ್ತರಿಸಿದರು. ಆ ಟಿಪ್ಪಣಿಯಲ್ಲಿ ಕೊನೆಯ ವಾಕ್ಯ "ಸುಮತೀಂದ್ರ ನಿಜವಾದ ಕವಿ" ಎಂಬುದಾಗಿ ಬರೆದಿದ್ದರು. ೧೯೫೩ರಲ್ಲಿ ಇಂಗ್ಲಿಷ್ ಆನರ್ಸ್ ಕೋರ್ಸ್‌ಗೆ ಪ್ರವೇಶಪಡೆದೆ. ಪ್ರೋಫೆಸರ್ ಜಿ.ಪಿ.ರಾಜರತ್ನಂ, ಪ್ರೋ.ವಿ.ಸೀತಾರಾಮಯ್ಯ ನನಗೆ ಕನ್ನಡ ಕಲಿಸಿದ ಗುರುಗಳು. ಪ್ರೋ.ಕೆ.ನರಸಿಂಹಮೂರ್ತಿ ಇಂಗ್ಲಿಷ್ ಕಲಿಸಿದರು. ಆ ಮುಂದಿನ ವರ್ಷ ಕೆ.ಎಸ್.ನಿಸಾರ್ ಅಹಮದ್ ವಿದ್ಯಾರ್ಥಿಯಾಗಿ ಸೆಂಟ್ರಲ್ ಕಾಲೇಜನ್ನು ಸೇರಿದರು. ೧೯೫೫ರಲ್ಲಿ ಲಂಕೇಶ್ ಸೇರಿದರು. ಪ್ರೋ.ರಾಜರತ್ನಂರವರು ತಮ್ಮ ಕವನ ಓದಿ ಛಂದೋಬದ್ಧವಾಗಿ ಬರೆಯುವುದನ್ನು ಕಲಿಸಿದರಲ್ಲದೆ ನಮ್ಮ ಕವನಗಳನ್ನು ಸೆಂಟ್ರಲ್ ಕಾಲೇಜ್ ಸಂಘದ ಪರವಾಗಿ ಪ್ರಕಟಿಸಿದರು. ೧೯೫೫ರಲ್ಲಿ ಲಂಕೇಶ್ ಮತ್ತು ನಿಸಾರ್ ಅಹಮದ್‌ರವರನ್ನು ಭೇಟಿಮಾಡಲು ಬಯಸಿರುವುದಾಗಿ ಬರೆದರು. ಹೊಸಗನ್ನಡ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಪತ್ರಿಕೆಯೊಂದನ್ನು ಪ್ರಕಟಿಸುವ ವಿಷಯವಾಗಿ ನಮ್ಮೊಂದಿಗೆ ಮಾತನಾಡಿದರು. ಅಡಿಗರು ತುಂಬಾ ಮಹತ್ವದ ಲೇಖಕರೆಂದು ನನಗೆ ಅನಿಸಿತ್ತು. ಆದ್ದರಿಂದ ಇಂಗ್ಲಿಷ್ ಆನರ್ಸ್ ಮುಗಿಸುವ ಹೊತ್ತಿಗಾಗಲೇ ನಾನು ಹಳೆ ಮತ್ತು ಹೊಸ ಲೇಖಕರ ಸಹವಾಸಕ್ಕೆ ಬಂದಿದ್ದೆ. ಆ ಹೊತ್ತಿಗೆ ನಾನೊಬ್ಬ ಲೇಖಕನೆಂದು ಗುರುತಿಸಲ್ಪಟ್ಟಿದ್ದೆ. ೧೯೫೭ರಿಂದ ೧೯೬೦ರ ವರೆಗೆ ಬೆಳಗಾವಿಯ ಲಿಂಗರಾಜ ಕಾಲೇಜಿನಲ್ಲಿ ಇಂಗ್ಲಿಷ್ ಕಲಿಸುತ್ತಿದ್ದೆ. ಅಲ್ಲಿ ಪಿ.ಶ್ರೀನಿವಾಸರಾವ್ ನನ್ನ ಸಹೋದ್ಯೋಗಿಯಾಗಿದ್ದರು. ನಾನು ಅವರ ತಂಗಿಯ ಪ್ರೇಮಪಾಶದಲ್ಲಿ ಸಿಲುಕಿಕೊಂಡೆ. ಆಕೆ ನನಗಿಂತ ಎಂಟುವರ್ಷ ಚಿಕ್ಕವಳು. ಬೆಳಗಾವಿಯಲ್ಲಿ ಎ.ಕೆ.ರಾಮಾನುಜಮ್‌ರವರ ಭೇಟಿಯಾಯಿತು. ೧೯೬೦-೬೩ರ ವರೆಗೆ ನಾನು ಮತ್ತು ಶ್ರೀನಿವಾಸರಾವ್ ಮುಂಬಯಿಯ ಒಂದು ಕಾಲೇಜಿನಲ್ಲಿ ಇಂಗ್ಲಿಷ್ ಕಲಿಸಿದೆವು. ಅಲ್ಲಿ ನಾವು ನಿಸ್ಸಿಮ್ ಇಝಿಕಲ್, ಪ್ರೋ.ನಾರಾಯಾಣ ರೇ ಮತ್ತು ವೃಂದಾ ಕರೆಂದಿಕರ್‌ರವರನ್ನು ಭೇಟಿಮಾಡಿದೆ. ಅಡಿಗರವರ ಕವನಗಳನ್ನು ಇಂಗ್ಲಿಷ್‌ಗೆ

ಭಾಷಾಂತರಿಸಿದೆ. ಶ್ರೀನಿವಾಸರಾವ್ ಅದನ್ನು ಪರೀಕ್ಷಿಸಿದರು. ಆ ಸಮಯಕ್ಕೆ ನಾನು ಓರ್ವ ಕ್ಯಾಥೋಲಿಕ್ ಹುಡುಗಿಯ ಪ್ರೇಮದಲ್ಲಿ ಸಿಕ್ಕಿಕೊಂಡೆ ಅವಳಿಗೆ ಕನ್ನಡ ಗೊತ್ತಿರಲಿಲ್ಲ. ಅವಳಿಗಾಗಿ ಇಂಗ್ಲಿಷ್‌ನಲ್ಲಿ ಪದ್ಯಗಳನ್ನು ಬರೆದೆ. ಅದಾಗ್ಯೂ ಶ್ರೀನಿವಾಸರಾವ್‌ರವರ ತಂಗಿಯೊಂದಿಗೆ ನನ್ನ ಪ್ರೇಮವನ್ನು ಉಳಿಸಿಕೊಂಡೆ. ಒಂದು ಸಲ ಪ್ರೊ.ರೇ ನನ್ನನ್ನು, "ನಾಡಿಗ್, ನೀನು ಯಾವ ಹುಡುಗಿಯನ್ನು ಮದುವೆಯಾಗುವೆ? ಈ ಕ್ಯಾಥೋಲಿಕ್ ಹುಡುಗಿಯನ್ನೋ ಅಥವಾ ರಾವ್‌ರವರ ತಂಗಿಯನ್ನೋ?" ಈ ಪ್ರಶ್ನೆಗೆ ಉತ್ತರಕೊಡುವುದು ಕಷ್ಟವಾಯಿತು. ನನಗೆ ಇನ್ನೊಂದು ಪ್ರಶ್ನೆ ಎದುರಾಯಿತು. ನಾನು ಇಂಗ್ಲಿಷ್ ಕವಿಯಾಗಬೇಕೆ ಅಥವಾ ಕನ್ನಡ ಕವಿಯಾಗಬೇಕೆ. ಆದ್ದರಿಂದ ಸಹಜವಾಗಿ ಒಂದು ಕಡೆಗೆ ಆಯ್ಕೆ ಕ್ಯಾಥೋಲಿಕ್ ಹುಡುಗಿ ಮತ್ತು ಇಂಗ್ಲಿಷ್, ಇನ್ನೊಂದು ಕಡೆಗೆ ರಾವ್‌ರವರ ತಂಗಿ ಮತ್ತು ಕನ್ನಡವೋ ಎಂಬುದಾಗಿತ್ತು. ಕ್ಯಾಥೋಲಿಕ್ ಹುಡುಗಿ ನಾನು ಕ್ಯಾಥೋಲಿಕನಾಗಬೇಕೆಂದು ಒತ್ತಾಯಿಸಿದ್ದರಿಂದ ಅವಳು ಸಮಸ್ಯೆ ಬಗೆಹರಿಸಿದಳು. ಸರಿಸುಮಾರು ಆ ಸಮಯದಲ್ಲಿ ನಾನು ಎಂ.ಎನ್.ರಾಯ್ ಓದಿದ್ದೆ ಆದ್ದರಿಂದ ಯುಕ್ತಾಯುಕ್ತ ಪರಿಜ್ಞಾನಿಯಾಗಿದ್ದೆ. ಹೃದಯದಲ್ಲಿ ನಾಸ್ತಿಕನಾಗಿದ್ದೆ. ನಾನು ಮತಾಂತರಕ್ಕೆ ಸಿದ್ಧನಿರಲಿಲ್ಲ. ಹಾಗಾಗಿ ಪ್ರೇಮಕಥೆ ಮುಕ್ತಾಯಗೊಂಡಿತು. ಅನಂತರ ನನ್ನ ಚಿಕ್ಕಪ್ಪ ರಾವ್‌ರವರ ತಂಗಿಯ ಜೊತೆಗೆ ನನ್ನ ಮದುವೆಯ ಪ್ರಸ್ತಾಪವನ್ನು ಮರುಜೀವಗೊಳಿಸಿದರು. ಹೀಗಾಗಿ ೧೯೬೦ರಲ್ಲಿ ಅವಳನ್ನು ನಾನು ಮದುವೆಯಾದೆ. ೧೯೬೩ರಲ್ಲಿ ಮಾರ್ಗೋವಾದಲ್ಲಿ ಅಧ್ಯಾಪನ ವೃತ್ತಿಯನ್ನು ಕೈಗೊಂಡೆ. ೧೯೬೫ರಲ್ಲಿ ಮೋಪ್ಯಾದಲ್ಲಿರುವ ಸೇಂಟ್ ಕ್ಷೇವಿಯರ್ ಕಾಲೇಜಿಗೆ ಹೋದೆ. ಅಲ್ಲಿ ಇಂಗ್ಲಿಷ್ ವಿಭಾಗದ ಮುಖ್ಯಸ್ಥನಾದೆ. ಅಲ್ಲಿಯ ಎಂಟುವರ್ಷಗಳ ನನ್ನ ವಾಸದಲ್ಲಿ ನಾನು ಕೊಂಕಣಿ ಮತ್ತು ಇಂಗ್ಲಿಷ್ ಉಸಿರಾಡಿದೆ. ಮಧ್ಯಂತರದಲ್ಲಿ ಕನ್ನಡವನ್ನು. ಬೆಳಗಾವಿ, ಮುಂಬೈ ಮತ್ತು ಗೋವಾದಂಥ ಕನ್ನಡೇತರ ಪ್ರದೇಶದಲ್ಲಿದ್ದರೂ ಬೇಸಿಗೆ ಮತ್ತು ಕ್ರಿಸ್ಮಸ್ ರಜೆಗಳಲ್ಲಿ ನಾವು ಬೆಂಗಳೂರು, ಮೈಸೂರು ಮತ್ತು ಧಾರವಾಡಕ್ಕೆ ಹೋಗಿ ಬರುತ್ತಿದ್ದೆವು. ಆಗ ನಾನು ಎಲ್ಲ ಪ್ರಮುಖ ಕನ್ನಡ ಸಾಹಿತಿಗಳನ್ನು ಭೇಟಿಮಾಡುತ್ತಿದ್ದೆ. ಅದು ಹಿತಕರವಾಗಿತ್ತು. ಬೆಂಗಳೂರಿನಲ್ಲಿ ನೆಲಸಬೇಕೆಂದು ಒಳಗಿನ ಒತ್ತಾಸೆಯಿತ್ತು ಏಕೆಂದರೆ ನಾನು ಕನ್ನಡ ಸಾಹಿತ್ಯಕ ಚಟುವಟಿಕೆಗಳ ಮಧ್ಯದಲ್ಲಿ ಇರಬಹುದಾಗಿತ್ತು. ಆನಂತರ ೧೯೭೧ರಲ್ಲಿ ಅಮೇರಿಕಾಕ್ಕೆ ಹೋದೆ. ಅಲ್ಲಿ ಟೆಂಪಲ್ ವಿಶ್ವವಿದ್ಯಾನಿಲಯ ಸೇರಿದೆ. ಇಂಗ್ಲಿಷ್‌ನಲ್ಲಿ ಪಿ.ಎಚ್.ಡಿ ಮಾಡಿದೆ. ಅಲ್ಲಿ ನನ್ನ ಭಾವಮೈದುನ ಶ್ರೀನಿವಾಸರಾವ್ ಜೊತೆಯಲ್ಲಿದ್ದೆ. ಇದು ಕೆಲವು ತಿಂಗಳು ಮಾತ್ರ. ಶ್ರೀನಿವಾಸ್‌ರವರ ಹೆಂಡತಿ ಅವರೊಂದಿಗೆ ಇರಲು ಬಂದಮೇಲೆ ನಾನು ಅವರ ಮನೆಯಿಂದ ಹೊರಬಂದೆ. ಅಷ್ಟು ಹೊತ್ತಿಗೆ ಅಮೇರಿಕಾದ ಜೀವನಶೈಲಿಯೊಂದಿಗೆ ಪರಿಚಿತನಾಗಿದ್ದೆ. ನನಗೆ ಅನೇಕ ಅಮೇರಿಕನ್ ಸ್ನೇಹಿತರಿದ್ದರು. ನಾವು ಆಗಾಗ್ಗೆ ಭೋಜನಕೂಟ ಏರ್ಪಡಿಸುತ್ತಿದ್ದೆವು. ನಾನು ನೃತ್ಯ ಮಾಡಿದೆ. ನನ್ನ ಗೆಳತಿಯರೊಂದಿಗೆ ಹೋಗಿಬಂದು ಮಾಡುತ್ತಿದ್ದೆ. ಬೇರೆ ನಾಲ್ಕು ಜನ ವಿದ್ಯಾರ್ಥಿಗಳೊಂದಿಗೆ ನಾನು ವಾಸವಾಗಿದ್ದೆ. ವಿಯೆಟ್ನಾಂ ವಿರೋಧಿ ಪ್ರತಿಭಟನೆಯಲ್ಲಿ ಭಾಗವಹಿಸಿದೆ. ಡೆಮಾಕ್ರೆಟ್ಸ್‌ಗಳೊಂದಿಗೆ ಸೇರಿಕೊಂಡು ಮೇಕ್ ಗೋವರ್ ಪರವಾಗಿ, ನಿಕ್ಸನ್‌ಗೆ ವಿರೋಧವಾಗಿ ಹಸ್ತಪತ್ರಿಕೆಗಳನ್ನು ಹಂಚಿದೆ. ಆರು ತಿಂಗಳಕಾಲ ಓರ್ವ

ಅಮೇರಿಕನ್ ಯಹೂದಿ ಮಿತ್ರನೊಂದಿಗೆ ಇದ್ದೆ. ಇಂಗ್ಲಿಷ್‌ನಲ್ಲಿ ಕವನಗಳನ್ನು ಬರೆಯಲಾರಂಭಿಸಿದೆ. ಅಲ್ಲದೆ ವಿಶ್ವವಿದ್ಯಾನಿಲಯದ ಆವರಣಕ್ಕೆ ಸಂಬಂಧಿಸಿದಂತೆ ಕಾವ್ಯ ಪತ್ರಿಕೆಯನ್ನು ಪ್ರಾರಂಭಿಸಿದೆ. ನಾನು ಹೆಚ್ಚು ಹೆಚ್ಚಾಗಿ ಅಮೇರಿಕನ್ ಆಗಲಾರಂಭಿಸಿದೆ. ಪಿ.ಎಚ್.ಡಿ.ನಂತರ ಅಮೇರಿಕಾದಲ್ಲಿ ಅಧ್ಯಾಪಕ ವೃತ್ತಿಯನ್ನು ಕೈಗೊಳ್ಳಬಯಸಿದೆ. ಒಂದು ವೇಳೆ ಇದು ಸಂಭವಿಸಿದ್ದರೆ ಈಗ ನಾನು ಬರೆದಿರುವ "ಕನ್ನಡ ನನ್ನ ಪ್ರಾಣ" ಎಂಬ ಲೇಖನವನ್ನು ಕನಸಿನಲ್ಲಿಯೂ ಯೋಚಿಸಲು ಸಾಧ್ಯವಾಗುತ್ತಿರಲಿಲ್ಲ.

ಫಿಲಿಡೆಲ್ಫಿಯಾದಲ್ಲಿ ಅಮೇರಿಕನ್ ಇಂಗ್ಲಿಷ್ ನನ್ನ ಉಸಿರಾಗಿತ್ತು. ಅದು ನನ್ನ ಊಟ ಮತ್ತು ನಿದ್ರೆಯಾಗಿತ್ತು. ನನ್ನ ಕನಸುಗಳೂ ಕೂಡ ಅಮೇರಿಕನ್ ಇಂಗ್ಲಿಷ್‌ನಲ್ಲಿದ್ದವು. ನಾನು ಗೋಳೋ ಎಂದು ಅತ್ತೆ. ನನ್ನ ಮಾತೃಭಾಷೆ ಕನ್ನಡವೇ ನೀ ಎಲ್ಲಿದ್ದೀಯಾ? ನನ್ನ ವ್ಯಕ್ತಿತ್ವ ನುಚ್ಚುನೂರಾಗುತ್ತಿತ್ತು. ನನ್ನ ಕೈಗಳು ಡಾಲರ್ ಕನಸುಗಳಿಂದ ತುಂಬಿದ್ದವು. ನನ್ನ ಎದುರಿಗೆ ಮಿದಾಸ್ ಮತ್ತು ಪುಷ್ಪುಗಳ ಕಲ್ಪನೆಗಳು ತೇಲಾಡಿದವು. ಬಹುಷಃ ಅದೇ ನನ್ನನ್ನು ಎಚ್ಚರಿಸಿತು. ಆಗಿನ ಕಾಲದಲ್ಲಿ ಒಂದು ಡಾಲರ್ ಎಂದರೆ ಹತ್ತು ರುಪಾಯಿಗಳು. ಕಪ್ಪು ಪೇಟೆಯಲ್ಲಿ ಇನ್ನೂ ಸ್ವಲ್ಪ ಹೆಚ್ಚು. ಒಂದು ತಿಂಗಳ ಬಡ್ಡಿಯನ್ನು ಲೆಕ್ಕಹಾಕಿದೆ. ಒಂದು ವರ್ಷ ಮತ್ತು ಹತ್ತು ವರ್ಷಗಳ ಬಡ್ಡಿ ಲೆಕ್ಕಹಾಕಿದೆ. ಒಟ್ಟು ಮೊತ್ತ ನಂಬಲಸಾಧ್ಯವೆನಿಸಿತು. ನನ್ನ ಆತ್ಮವನ್ನು ಡಾಲರ್‌ಗೆ ಮಾರಿಕೊಳ್ಳಬೇಕೆ ಮತ್ತು ಪುಷ್ಪನ ಜೀವನವನ್ನು ಅನುಭವಿಸಬೇಕೆ? ಈ ಸ್ತ್ರೀಯರು, ಈ ಕುಡಿತಗಳು, ಈ ವಾರಾಂತ್ಯ ಭೋಜನಗಳು, ಕಾರುಗಳಲ್ಲಿ ಓಡಾಟ ಇವೆಲ್ಲವೂ ನನಗೆ ಬೇಕೆ? ಅಲ್ಲಿ ನನಗೆ ನನ್ನ ಮನೆಯ ಸ್ವಾತಂತ್ರ್ಯವಿರಲಿಲ್ಲ. ನಿರಂತರ ಸಹವಾಸ ದೊರೆಯಲಿಲ್ಲ. ಈ ಪ್ರಾರಂಭಿಕ ತೀವ್ರತೆಯೊಂದಿಗೆ ದೂರದಲ್ಲಿರುವ ನನ್ನ ಎದುರಾಳಿಗಳನ್ನು ಕಲ್ಪಿಸತೊಡಗಿದೆ. ಎಂದೆಂದಿಗೂ ನಾನು ಸಖ್ಯ ಕಳೆದುಕೊಳ್ಳಬಹುದೆಂದು ಭೀತಿಯುಂಟಾಯಿತು. ನನ್ನ ಕರ್ಮದ ಹಾಲು ಕುದಿಯಲಾರಂಭಿಸಿ, ಕೆನೆಗಟ್ಟಿದ ಮೇಲೆ ಬೆಂಕಿಯಾರಿತು. ಆ ಸಮಯದಲ್ಲಿ ಅಡಿಗರನ್ನು ಅಮೇರಿಕಾಕ್ಕೆ ಆಹ್ವಾನಿಸಿದೆ. ಅವರನ್ನು ಬೋನಿಶೆಡ್ಜ್‌ರವರಿಗೆ ಪರಿಚಯಿಸಿದೆ. ಅವರು ಏನೆಂದು ಕೇಳಿದರು ಮತ್ತು ಕಣ್ಣನ್ನು ಮಿಟುಕಿಸಿದರು. ಆಕೆ ನನ್ನನ್ನು ಮನಗೆ ಕಳುಹಿಸುವೆ ಎಂದು ಹೇಳಿದೆ. ನಿನ್ನನ್ನು ಭಾರತಕ್ಕೆ ಖಂಡಿತವಾಗಿ ಕರೆದುಕೊಂಡು ಬರುವುದಾಗಿ ನಿಮ್ಮ ಹೆಂಡತಿಗೆ ಮಾತು ಕೊಟ್ಟಿದ್ದೇನೆ ಎಂದು ಅಂದರು.

ಆಗಬಹುದೆಂದು ನಾನು ಹೇಳಿದೆ. "ನಿಮ್ಮ ಅಧ್ಯಯನ ಮುಗಿಯುವುದೋ?" ಎಂದು ಅಡಿಗ ಕೇಳಿದರು. "ಯಾವ ಅಧ್ಯಯನ? ಅದರ ಬಗ್ಗೆ ನನಗೆ ಚಿಂತೆಯಿಲ್ಲ. ನಿಮ್ಮೊಂದಿಗೆ ಬರುವೆ" ಎಂದು ನಾನ ಅಂದೆ. ಅಡಿಗರು ಅಮೇರಿಕಾಕ್ಕೆ ಬರುವ ಹೊತ್ತಿಗೆ ಅಮೇರಿಕಾದ ಶೈಕ್ಷಣಿಕ ವಾತಾವರಣದ ಬಗ್ಗೆ ಭ್ರಮ ನಿರಸನಗೊಂಡಿದ್ದೆ. ನನ್ನ ಅಧ್ಯಾಪಕರು ನನ್ನ ಒಳಗಿನ ಭಾವನೆಗಳ ಬಗ್ಗೆ ಬೆಲೆ ಕೊಡುತ್ತಿರಲಿಲ್ಲ. ನಾನು ವಿರಾಮ, ಅಲ್ಪವಿರಾಮ ಮತ್ತು ಟಿಪ್ಪಣಿ ಪಾರಂಗತನಾಗಬೇಕೆಂದು ಅವರು ಬಯಸಿದ್ದರು. ಯಾವುದೇ ಭೇದವಿಲ್ಲದೆ ಬಹುದೊಡ್ಡ ಉಪಮೇಯಗಳನ್ನು ಬರೆದಿದ್ದರು. ಆದ್ದರಿಂದ ನನ್ನ ಅಧ್ಯಯನವನ್ನು ಬಿಟ್ಟುಬಿಡಲು ಬಯಸಿದೆ. ಕನ್ನಡ ವಾತಾವರಣವಿಲ್ಲದಿರುವುದು ನನ್ನನ್ನು ನೀರಿನಿಂದ ಎತ್ತಿದ ಮೀನಿನಂತೆ ಮಾಡಿತು. ಬಹುವಾಗಿ ನೋವನ್ನು

ಅನುಭವಿಸುತ್ತಿದ್ದೆ. ಆದ್ದರಿಂದ ಅಮೇರಿಕಾದಿಂದ ತೊಲಗಬೇಕೆಂದು ತಕ್ಷಣ ತೀರ್ಮಾನ ಕೈಗೊಂಡೆ. ಅಡಿಗರೊಂದಿಗೆ ಭಾರತಕ್ಕೆ ಹಿಂದಿರುಗಿದೆ. ಭರತಭೂಮಿಯನ್ನು ಸ್ಪರ್ಶಿಸಿದ ಕೂಡಲೆ ನಾನು ರೋಮಾಂಚಿತಗೊಂಡೆ. ಬೆಂಗಳೂರನ್ನು ತಲುಪಿದಾಗ ನನಗೆ ಸಂತೋಷವಾಯಿತು. ಕನ್ನಡ ಬಗ್ಗೆ ಒಣಗಿಹೋಗಿದ್ದ ಪ್ರೇಮ ಉಕ್ಕಿಬಂತು. ತಕ್ಷಣ ನನ್ನ ಮಟ್ಟಿಗೆ ಕನ್ನಡದ ಅರ್ಥ ಏನೆಂದು ಗೊತ್ತಾಯಿತು.

ಕಳೆದ ಮೂವತ್ತೈದು ವರ್ಷಗಳಿಂದ ನಾನು ಅಮೇರಿಕಾಕ್ಕೆ ಭೇಟಿಕೊಟ್ಟಿಲ್ಲ. ಹೋಗುವ ಪ್ರಯತ್ನವನ್ನೂ ಮಾಡಿಲ್ಲ. ಕನ್ನಡ ನನ್ನನ್ನು ಸದಾ ಕೆಲಸದಲ್ಲಿ ತೊಡಗಿರುವಂತೆ ಮಾಡಿದೆ. ನನ್ನ ಎರಡು ದೀರ್ಘ ಕವಿತೆಗಳಾದ 'ದಾಂಪತ್ಯ ಗೀತ' ಮತ್ತು 'ಪಂಚಭೂತ' ಇವುಗಳನ್ನು ಭಾರತದ ಗಣ್ಯ ವಿದ್ವಾಂಸರು, ವಿಮರ್ಶಕರು ಹಾಗು ಬರಹಗಾರರು ಬಹುವಾಗಿ ಮೆಚ್ಚಿದ್ದಾರೆ. ದಾಂಪತ್ಯ ಗೀತವು ಹನ್ನೆರಡು ಭಾರತೀಯ ಭಾಷೆಗಳಲ್ಲಿ ಅನುವಾದಗೊಂಡಿದೆ. ಅಲ್ಲದೆ ಸಂಸ್ಕೃತ ಮತ್ತು ಇಂಗ್ಲಿಷ್‌ನಲ್ಲಿ ಅನುವಾದಿತವಾಗಿದೆ. ಒಬ್ಬ ವ್ಯಕ್ತಿ ದೊಡ್ಡ ಲೇಖಕನಾಗಲು ಭಾಷೆ ಸಹಾಯ ಮಾಡಬಲ್ಲದು. ಮಾಸ್ತಿ ವೆಂಕಟೇಶಯ್ಯಂಗಾರ್ ತಮಿಳಿನಲ್ಲಿ ಬರೆಯಲಿಲ್ಲ. ರಾಜಾಜಿ ಮಾಸ್ತಿಯವರ ಆತ್ಮೀಯ ಸ್ನೇಹಿತರಾಗಿದ್ದರು. ಮಾಸ್ತಿ ಕರ್ನಾಟಕದಲ್ಲಿ ವಾಸಿಸಿದರು. ಅವರ ಸುತ್ತ ಬಿ.ಎಂ.ಶ್ರೀ, ಎ.ಆರ್.ಕೃಷ್ಣಶಾಸ್ತ್ರಿ, ಬೇಂದ್ರೆ, ಕಾರಂತ ಮತ್ತು ಇನ್ನಿತರರು ಇದ್ದರು. ಅವರು ಕರ್ನಾಟಕದಲ್ಲಿ ವಾಸಿಸಿದರು ಮತ್ತು ಕನ್ನಡ ಭೂಮಿಗೆ ಬದ್ಧರಾಗಿದ್ದರು.

ಅಂಥ ಆಳವಾದ ಬದ್ಧತೆಯ ಪ್ರದೇಶ, ಆಹಾರ, ಜನತೆ ಮತ್ತು ಭಾಷೆಯೊಂದಿಗೆ ಇಲ್ಲದೇ ಹೋದಲ್ಲಿ ಯಾರೂ ಸಹ ದೊಡ್ಡ ಸೃಜನಾತ್ಮಕ ಬರಹಗಾರನಾಗಲು ಸಾಧ್ಯವಿಲ್ಲ. ಆದ್ದರಿಂದಲೇ ಇಂಗ್ಲಿಷ್‌ನಲ್ಲಿ ಬರೆಯುವ ಲೇಖಕರು ದೊಡ್ಡ ಕೃತಿಗಳನ್ನು ಬರೆದಿಲ್ಲ. ಅವರು ಕೇವಲ ಜನಪ್ರಿಯ ಸಾಹಿತ್ಯ ಬರೆಯಲು ಮಾತ್ರ ಸಾಧ್ಯ. ಬಹುಷಃ ಈ ಕಾರಣದಿಂದಲೇ ನಾನು ನನ್ನನ್ನು ಇಂಗ್ಲಿಷ್ ಭಾಷೆಗೆ ಕಟ್ಟಿಕೊಳ್ಳಲಿಲ್ಲ. ಇಂಗ್ಲಿಷ್ ಭಾಷೆಯಲ್ಲಿ ಎರಡು ಸ್ನಾತಕೋತ್ತರ ಪದವಿಗಳನ್ನು ಹೊಂದಿದ್ದೇನೆ. ಇಂಗ್ಲಿಷ್‌ನಲ್ಲಿ ಕವಿತೆಗಳನ್ನು ಬರೆದಿದ್ದೇನೆ. ಮೂವತ್ತೈದು ವರ್ಷ ಇಂಗ್ಲಿಷ್ ಬೋಧಿಸಿದ್ದೇನೆ. ಕನ್ನಡೇತರ ಪ್ರದೇಶಗಳಲ್ಲಿ ಸುಮಾರು ಇಪ್ಪತ್ತೆರಡು ವರ್ಷಗಳ ಕಾಲ ಇದ್ದೇನೆ. ಹೊಟ್ಟೆ ಪಾಡಿಗಾಗಿ ಇಂಗ್ಲಿಷ್ ಕಲಿಸಿದ್ದೇನೆ. ಅದಾಗ್ಯೂ ಇಂಗ್ಲಿಷ್ ನನ್ನ ಪ್ರಾಣವೆಂದು ಹೇಳಲು ಸಾಧ್ಯವಿಲ್ಲ. ಓರ್ವ ಕವಿಗೆ ಅವನ ಮಾತೃಭಾಷೆ ಮಾತ್ರ ಪ್ರಾಣವಾಗಬಲ್ಲದು. ಮಗುವಾಗಿ ಅವನು ಕೇಳುವ ಶಬ್ದಗಳು, ಅವನು ನೋಡುವ ಬಟ್ಟೆಬರೆಗಳು ಮತ್ತು ಅವನು ನೋಡುವ ವಸ್ತುಗಳು ಅವನ ಮನಸ್ಸಿನ ಮೇಲೆ ಪ್ರಗಾಢವಾದ ಮುದ್ರೆಯನ್ನು ಒತ್ತುತ್ತದೆ. ಅವನು ಬೆಳೆದಂತೆಲ್ಲಾ ಸುತ್ತಲಿನ ಜಗತ್ತು ಅವನಿಗೆ ಭಾಷೆಯನ್ನು ಕೊಡುವುದರ ಮೂಲಕ ಅವನ ಸಂಬಂಧಿಕರು ಮತ್ತು ಗೆಳೆಯರೊಂದಿಗೆ ಅರ್ಥಪೂರ್ಣವಾದ ಸಂಬಂಧ ಬೆಸೆಯಲು ಸಹಾಯ ಮಾಡುತ್ತದೆ. ಅವನ ಸುತ್ತಲಿನ ಜಗತ್ತು ಮೃದು ಭಾವನೆಗಳಿಂದಲೂ ಮತ್ತು ಭಾವಾತಿರೇಕಗಳಿಂದಲೂ ಭರಿತವಾಗಿರುತ್ತದೆ. ಅವನು ತನ್ನ ಭಾಷೆಯ ಮೂಲಕ ಸ್ಪಂದಿಸಲು ಮತ್ತು ಆಲೋಚಿಸಲು ಆರಂಭಿಸುತ್ತಾನೆ. ತನ್ನ ಮಾತೃಭಾಷೆಯಲ್ಲಿ ಯಾರೇ ಆಗಲಿ ಮಹಾನ್ ಸಾಹಿತ್ಯವನ್ನು ರಚಿಸಬಹುದು.

ರೆವೆರಂಡ್ ಕಿಟ್ಟಲ್ ಹದಿನೈದು ವರ್ಷಗಳಷ್ಟು ಕಾಲ ಕರ್ನಾಟಕದಲ್ಲಿ ಕೆಲಸಮಾಡಿ ಕನ್ನಡ-ಇಂಗ್ಲಿಷ್ ಪದಕೋಶವನ್ನು ರಚಿಸಲು ಸಾಧ್ಯವಾಯಿತು. ಆದರೆ ಅವನು ಓರ್ವ ಕವಿಯಾಗಲೀ, ಕಾದಂಬರಿಕಾರನಾಗಲೀ, ಸಣ್ಣ ಕಥೆಗಾರನಾಗಲೀ ಆಗಲು ಸಾಧ್ಯವಾಗಲಿಲ್ಲ. ಆದರೆ ಮಾಸ್ತಿಯವರು ಅದ್ಹೇಗೆ ದೊಡ್ಡ ಕನ್ನಡ ಸಾಹಿತಿ ಆದರೆಂಬ ಪ್ರಶ್ನೆ ನನ್ನನ್ನು ಅನೇಕ ವರ್ಷ ಕಾಡಿದೆ. ಅದಕ್ಕೆ ಉತ್ತರ ನನ್ನ ಬಳಿಯಿದೆ. ಮಾಸ್ತಿ ತಮ್ಮ ಮನೆಯಲ್ಲಿ ತಮಿಳು ಮಾತನಾಡುತ್ತಿದ್ದರು ಆದರೆ ಅವರು ಹುಟ್ಟಿದಾಗಿನಿಂದ ಕನ್ನಡ ಅವರ ಶುಶ್ರೂಷಕಿ ಆಗಿತ್ತು. ಅವರು ಕನ್ನಡ ಕೇಳಿದರು, ಕನ್ನಡ ಮಾತನಾಡಿದರು ಮತ್ತು ಬಾಲ್ಯದಿಂದಲೂ ಕನ್ನಡ ಓದಿದರು. ಭಾಷೆಯೊಂದಿಗಿನ ಅಂಥ ನಿಕಟ ಸಂಪರ್ಕ ಓರ್ವ ವ್ಯಕ್ತಿ ದೊಡ್ಡ ಲೇಖಕನಾಗಲು ಸಹಾಯ ಮಾಡಬಲ್ಲದು. ಯು.ಆರ್.ಅನಂತಮೂರ್ತಿ, ಬನ್ನಂಜೆ ಗೋವಿಂದಾಚಾರ್ಯ, ಮಲಯಾಳಿ ಕವಿ ಅಯ್ಯಪ್ಪ ಪಣಿಕರ್, ಗುಜರಾತಿ ಕವಿ ಸಿತಾಂಶು ಎಸ್.ಎಸ್.ಚಂದ್ರ, ಕೊಂಕಣಿ ಕವಿ ಮನೋಹರ ಸರದೇಸಾಯಿ, ಬೆಂಗಾಲಿ ವಿದ್ವಾಂಸ ಶಿಬನಾರಾಯಣ ಡೇ, ಹಿರಿಯ ವಿದ್ವಾಂಸ ಡಾ.ಕಪಿಲ್ ವಾತ್ಸಾಯನ ಹಾಗೂ ಇನ್ನಿತರರು ದಾಂಪತ್ಯಗೀತ ಮತ್ತು ಪಂಚಭೂತಗಳನ್ನು ಮಹತ್ವದ ಪ್ರಾದೇಶಿಕ ರಚನೆಗಳೆಂದು ಅಂಗೀಕರಿಸಿದ್ದಾರೆ. ರಾಜ್ಯೋತ್ಸವ ಪ್ರಶಸ್ತಿ, ದಿನಕರ ಪ್ರಶಸ್ತಿ, ಶ್ರೀಕೃಷ್ಣ ಪ್ರಶಸ್ತಿ ಮತ್ತು ಇನ್ನಿತರ ಅನೇಕ ಪ್ರಶಸ್ತಿ ಪಡೆದಿದ್ದೇನೆ. ನನ್ನ ಪ್ರಾಣವಾದ ಕನ್ನಡ ನನಗೆ ಗೌರವ, ಪ್ರಶಸ್ತಿಗಳು, ಮಾನ್ಯತೆ ಹಾಗೂ ಸ್ವಲ್ಪ ಹಣವನ್ನು ತಂದುಕೊಟ್ಟಿದೆ. ಒಂದು ವೇಳೆ ಕನ್ನಡ ನನ್ನ ಪ್ರಾಣ ಆಗದೆ ಹೋಗಿದ್ದರೆ ನನ್ನ ದೇಹದ ರಕ್ತ ಸಂಚಾರ ವ್ಯವಸ್ಥೆ ಇಂಗ್ಲಿಷ್‌ನಿಂದ ತುಂಬಿದಿದ್ದರೆ ಕನ್ನಡಿಗರ ಪ್ರೇಮ ಮತ್ತು ಗೌರವವನ್ನು ಕಳೆದುಕೊಳ್ಳುತ್ತಿದ್ದೆ. ಕನ್ನಡ ನನ್ನ ಪ್ರಾಣ ಎಂದು ಹೇಳುವುದಕ್ಕೆ ಅಭಿಮಾನವೆನಿಸುತ್ತದೆ. ಕನ್ನಡ ನನಗೆ ಅಗತ್ಯವಾದ ಬಲ ಮತ್ತು ಶಕ್ತಿ ಕೊಟ್ಟಿದೆ. ನನ್ನ ಆ ಪ್ರಾಣ ನನ್ನ ಕೃತಿಗಳ ಮೂಲಕ ದೀರ್ಘಕಾಲ ಬದುಕುವಂತೆ ಜೀವನ ಕೊಟ್ಟಿದೆ.

(ಅನು : ಸುಕೌ, ಕೃಪೆ-ಬೆಂಗಳೂರು ಆಕಾಶವಾಣಿ)

* * *

ಜನಪದ ವ್ಯಕ್ತಿ

ಸುಂದರಲಾಲ್ ಬಹುಗುಣ

ಎಂಭತ್ತೆರಡು ವಯಸ್ಸಿನ ಬಹುಗುಣ ಹೋದೆಡೆಗಳಲ್ಲಿ ಯುವಕರನ್ನು, ಪರಿಸರ ಪ್ರೇಮಿಗಳನ್ನು, ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಾರೆ. ಅವರು ಯಾವ ಅಧಿಕಾರದಲ್ಲೂ ಇಲ್ಲ. ಯಾವ ರಾಜಕೀಯ ಪಕ್ಷಕ್ಕೂ ಸೇರಿಲ್ಲ. ಆದರೂ ಕೂಡ ಅವರು ಹೋದೆಡೆಯಲ್ಲೆಲ್ಲ ಜನರನ್ನು ಆಕರ್ಷಿಸುವುದೇಕೆ, ಜನರ ಪ್ರೀತಿ ವಿಶ್ವಾಸ ಪಡೆಯುವುದೇಕೆ? ಇದಕ್ಕೆ ಕಾರಣ ಅವರು ಮರಗಿಡಗಳು, ನದಿಗಳು, ಪ್ರಕೃತಿ ಇತ್ಯಾದಿಗಳ ಬಗ್ಗೆ ಇಟ್ಟುಕೊಂಡಿರುವ ಅಪಾರವಾದ ಪ್ರೀತಿ. ತಮ್ಮ ಪ್ರಾಣವನ್ನು ತ್ಯಾಗ ಮಾಡಿಯಾದರೂ ಗಿಡಮರಗಳನ್ನು ಉಳಿಸಲು ಹೋರಾಡಿದ ವ್ಯಕ್ತಿ ಬಹುಗುಣ. ಸ್ವಾತಂತ್ರ್ಯ ಬಂದ ಕೂಡಲೆ ದೇಶದಲ್ಲಿ ಅಭಿವೃದ್ಧಿಯ ಯೋಜನೆಗಳು ಜಾರಿಗೆ ಬಂದವು. ಆಗ ಯೋಜಕರಿಗೆ ಪರಿಸರದ ಬಗ್ಗೆ ಕಾಳಜಿ ಇರಲಿಲ್ಲ. ಬೃಹತ್ ಅಣೆಕಟ್ಟುಗಳು, ದೊಡ್ಡ ಕೈಗಾರಿಕೆಗಳು ಹೊಸ ಭಾರತದ ದೇವಾಲಯಗಳೆಂದು ತಿಳಿಯಲಾಗಿತ್ತು. ಆದ್ದರಿಂದ ಪಂಚವಾರ್ಷಿಕ ಯೋಜನೆಗಳ ಒತ್ತು ಬೃಹತ್ ಯೋಜನೆಗಳ ಮೇಲೆಯೆ ಇತ್ತು. ಈ ಬೃಹತ್ ಯೋಜನೆಗಳೆಲ್ಲವೂ ಅರಣ್ಯಗಳನ್ನು ಕಬಳಿಸಿಬಿಡುತ್ತವೆ, ಸಾವಿರಾರು ಜನರನ್ನು ಉಚ್ಚಾಟಿತಗೊಳಿಸುತ್ತವೆ, ಪಕ್ಷಿಸಂಕುಲವನ್ನು ಅನಾಥಮಾಡುತ್ತವೆ, ಪರಿಸರ ವಿನಾಶಕ್ಕೆ ಹಾಗೂ ಹವಾಮಾನದ ತಾಪಮಾನದ ಹೆಚ್ಚಳಕ್ಕೆ ಕಾರಣವಾಗುತ್ತವೆ. ಈ ಭಯಾನಕ ಪರಿಸ್ಥಿತಿಯನ್ನು ತಿಳಿದ ಹಿಮಾಲಯದ ತಪ್ಪಲಿನಲ್ಲಿ ಹುಟ್ಟಿ ಬೆಳೆದ ಬಹುಗುಣರವರು ಅರಣ್ಯವನ್ನು ಉಳಿಸಲು ಮುಂದಾದರು. ಶಾಲಾ ಬಾಲಕನಾಗಿದ್ದಾಗಲೇ ಗಾಂಧೀಜಿಯವರಿಂದ ಪ್ರಭಾವಿತರಾಗಿದ್ದರು. ಅವರ ಹಿಂದ್-ಸ್ವರಾಜ್ ಓದಿದರು, ರಷ್ಯಾದ ಲೇಖಕ ಪೀಟರ್ ಕ್ರೊಪುಟ್ಕಿನ್‌ರ ಯುವಕರಿಗೆ ಕರೆ ಎಂಬ ಪುಸ್ತಕವನ್ನು ಓದಿದರು. ಸ್ವಾತಂತ್ರ್ಯ ಚಳುವಳಿ ಹಾಗೂ ಈ ಪುಸ್ತಕಗಳ ಪ್ರಭಾವ ಬಹುಗುಣರನ್ನು ಬದಲಾಯಿಸಿತು. ತಂದೆ ಅರಣ್ಯಾಧಿಕಾರಿಗಳು. ಅವರ ಜೊತೆ ಕುದುರೆ ಮೇಲೆ ಕುಳಿತು ಟೆಹರಿ-ಗಢವಾಲ್ ಅರಣ್ಯದಲ್ಲಿ ಸುತ್ತುತ್ತಿದ್ದಾಗ ಬಹುಗುಣರವರಿಗೆ ಎಂಟು ವರ್ಷ. ಅಂದಿನಿಂದಲೇ ಬಹುಗುಣರವರಿಗೆ ಅರಣ್ಯದ ಒಡನಾಟ ಪ್ರಾರಂಭವಾಗಿ ಇಂದಿನ ಅವರ ಇಳಿ ವಯಸ್ಸಿನಲ್ಲೂ ಮುಂದುವರೆದಿದೆ. ಟಿಹರಿ-ಗಢವಾಲ ದೇಶೀಯ ಸಂಸ್ಥಾನಗಳು. ಅಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಕಾರಾಗೃಹ ವಾಸ ಅನುಭವಿಸಿದರು. ಗಾಂಧೀಯವರ ಸತ್ಯಗ್ರಾಹದ ರೀತಿಯಿಂದ ಪ್ರಭಾವಿತರಾದ ಬಹುಗುಣರವರು ಟೆಹರಿ ಅಣೆಕಟ್ಟಿನ ನಿರ್ಮಾಣದ ವಿರುದ್ಧ ಆ ಸತ್ಯಾಗ್ರಹವನ್ನು ಬಳಸಿದರು. ೧೯೯೫ರಲ್ಲಿ ೪೫ದಿನಗಳ ಉಪವಾಸ ಮಾಡಿದರು. ಸರ್ಕಾರ ಇವರ ಸತ್ಯಾಗ್ರಹಕ್ಕೆ ಮಣಿದು ಅಣೆಕಟ್ಟೆಯ ಕೆಲಸವನ್ನು ನಿಲ್ಲಿಸಿತು. ಆದರೆ ಕೊಟ್ಟ ಮಾತನ್ನು ಮರೆತು ಪುನಃ ಕಟ್ಟೆಯ ನಿರ್ಮಾಣವನ್ನು ಸರ್ಕಾರ ಕೈಗೊಂಡಾಗ ಬಹುಗುಣರವರು ಪ್ರಾಯಶ್ಚಿತ್ತಕ್ಕಾಗಿ ೧೯೯೬ರಲ್ಲಿ ೭೪ ದಿನಗಳ ಉಪವಾಸ ಮಾಡಿದರು. ತಾತ್ಕಾಲಿಕವಾಗಿ ಸರ್ಕಾರ ಕಟ್ಟೆ ನಿಲ್ಲಿಸಿತು. ಮರಗಳ ರಕ್ಷಣೆಗಾಗಿ ಅವುಗಳನ್ನು ಅಪ್ಪಿಕೊಳ್ಳುವ ಆಂದೋಲನ ಪ್ರಾರಂಭಿಸಿದರು. ಈ ಆಂದೋಲನ ದೇಶವ್ಯಾಪಿಯಾಯಿತು. ಈ ಭೂಮಿಯ ಮೇಲೆ ಗಿಡಮರಗಳು ಇರುವವರೆಗೂ ಸುಂದರಲಾಲ್ ಬಹುಗುಣರವರ ಹೆಸರೂ ಇರುವುದು.

* * *

ಸಾವಯುವ ಕೃಷಿಯ ಇನ್ನೊಂದು ಮುಖ

– *ಪ್ರಸಾದ್ ರಕ್ಷಿದಿ*

ನಾವೆಂದುಕೊಂಡಂತೆ ಪರಿಸ್ಥಿತಿ ಅಷ್ಟು ಸರಳವಾಗಿ ಖಂಡಿತ ಇಲ್ಲ. ಒಂದೆಡೆ ಪರಿಸರ ಪ್ರಿಯರು, ಕೃಷಿಪಂಡಿತರುಗಳು, ಭಾನುವಾರದ ಕೃಷಿಕರು, ಹವ್ಯಾಸಿ ಕೃಷಿಕರು, ಹಾಗೂ ಅನೇಕ ಸಂಘಟನೆಗಳು–ಸಹಜಕೃಷಿ, ಸಾವಯವ ಕೃಷಿ, ನೆಲ–ಜಲ ಸಂರಕ್ಷಣೆ ಮುಂತಾದವುಗಳ ಬಗ್ಗೆ ನಡೆಸುವ ಕಾರ್ಯಕ್ರಮಗಳು, ವಿಚಾರ ಸಂಕಿರಣಗಳು, ಚಳುವಳಿಗಳು, ಜೊತೆಗೆ ಹಲವು ಕೃಷಿ ಪತ್ರಿಕೆಗಳಲ್ಲಿ ನಿರಂತರವಾಗಿ ಬರುತ್ತಿರುವ ಲೇಖನಗಳು, ಇವೆಲ್ಲವುಗಳಿಂದ ಸಾವಯವ ಕೃಷಿಗೆ ಸಿಕ್ಕಿದ ಪ್ರಚಾರದಿಂದಾಗಿ, ಸಾವಯವ ಪರಿಸರ ಸ್ನೇಹಿ ವಸ್ತುಗಳ ದೊಡ್ಡ ಉತ್ಪಾದಕರುಗಳೇ ಹುಟ್ಟಿಕೊಂಡಿದ್ದಾರೆ. ಇವರುಗಳು ಮುದ್ರಿಸಿ ಹಂಚುತ್ತಿರುವ ಕರಪತ್ರಗಳು ಯಾವುದೇ ದೊಡ್ಡ ರಾಸಾಯನಿಕ ಕಂಪನಿಗಳ ಪ್ರಚಾರ ಸಾಮಗ್ರಿಯನ್ನೂ ನಾಚಿಸುವಂತಿದೆ. ರಾಸಾಯನಿಕ ವಸ್ತುಗಳಿಗೆ ಹೋಲಿಸಿದರೆ ಇವುಗಳ ಬೆಲೆಯೂ ದುಬಾರಿಯಾಗಿದೆ. ಈ ವಿಚಾರ ಆಯುರ್ವೇದ ಔಷಧಿಗಳಂತಹ ವೈದ್ಯಕೀಯ ಉತ್ಪನ್ನಗಳಿಗೂ ಅನ್ವಯಿಸುತ್ತದೆ. ಸದ್ಯಕ್ಕಂತೂ ಇವುಗಳಲ್ಲಿ ಯಾವುದು ನಿಜವಾದ ಸಾವಯವ ಅಥವಾ ಪರಿಸರಸ್ನೇಹಿ ಎಂದು ನಿರ್ಧರಿಸಲು ಯಾವುದೇ ಮಾನದಂಡವೂ ಇಲ್ಲ. ವೈಯಕ್ತಿಕ ಪರಿಚಯ, ಅನುಭವ, ನಂಬಿಕೆಗಳನ್ನಾಧರಿಸಿ ಇವುಗಳನ್ನು ಕೊಳ್ಳಬೇಕಷ್ಟೆ.

ಈ ಬಗ್ಗೆ ನಡೆಯುವ ಚರ್ಚೆ, ಸಭೆ, ವಿಚಾರ ಸಂಕಿರಣಗಳನ್ನು ಗಮನಿಸಿದರೆ ಅಲ್ಲಿ ಮತ್ತೆ ಮತ್ತೆ ಅದೇ ತಜ್ಞರುಗಳು ಅದೇ ಜನರು ಇರುತ್ತಾರೆ. ಉದಾಹರಣೆಗೆ ನಮ್ಮ ಹಾಸನ ಜಿಲ್ಲೆಯಲ್ಲೊಂದು ಪರಿಸರ ಪ್ರಿಯರ ಸಂಘಟನೆ ಇದೆ. ಅದು ಅನೇಕ ಕಾರ್ಯಕ್ರಮಗಳನ್ನು ನಡೆಸುತ್ತದೆ. ಹೆಚ್ಚಿನ ಸಂದರ್ಭಗಳಲ್ಲಿ ಕೆಲವರು ಸ್ಥಳೀಯರನ್ನು ಬಿಟ್ಟು ಉಳಿದ ಪ್ರೇಕ್ಷಕರು ಕೂಡ ಪದೇ ಪದೇ ಬರುವವರೇ ಆಗಿರುತ್ತಾರೆ. ಬೇರೆ ಕಡೆಗಳಲ್ಲೂ ಸಹ ಇಂತಹ ಕಾರ್ಯಕ್ರಮಗಳಲ್ಲಿ ಪರಿಸ್ಥಿತಿ ಭಿನ್ನವಾಗೇನೂ ಇಲ್ಲ. ಈ ವಿಪರ್ಯಾಸ ನಮ್ಮ ಕಲೆ, ಸಾಹಿತ್ಯ, ನಾಟಕಗಳ ಕ್ಷೇತ್ರಗಳಲ್ಲೂ ಇದೆ. ಸಾಮಾನ್ಯವಾಗಿ ಈ ಎಲ್ಲ ಸಂದರ್ಭಗಳಲ್ಲಿ ಚರ್ಚೆಗೆ ಬರುವ ವಿಷಯವೆಂದರೆ ಜಾಗತೀಕರಣ. ಇದರ ಪರ–ವಿರೋಧವಾಗಿ ಯುದ್ಧಗಳೇ ನಡೆಯುತ್ತವೆ. ಜಾಗತೀಕರಣದಿಂದ ಪ್ರಳಯವೇ ಆಗಲಿದೆ ಎಂದು ಒಂದು ವಾದವಾದರೆ ಅದರಿಂದ ಸ್ವರ್ಗವೇ ಅವತರಿಸಲಿದೆ ಎಂದು ಇನ್ನೊಂದು ಗುಂಪು ವಾದಿಸುತ್ತದೆ. ಈ ಜಾಗತೀಕರಣವೆಂಬುದು ಏನೇನೋ ಮಾಡುವುದರ ಜೊತೆ ಅನೇಕ ಜನ ಸೆಮಿನಾರು ತಜ್ಞರಿಗೆ ಅನ್ನಹಾಕುತ್ತಿರುವುದಂತೂ ನಿಜ! ಈ ಜಾಗತೀಕರಣದ್ದೇ ಒಂದು ಪರ್ವವಿದೆ ಅದನ್ನು ಮುಂದೆ ಗಮನಿಸೋಣ.

ನಮ್ಮ ರೈತರು ಸಾವಯವ–ಸುಸ್ಥಿರ ಕೃಷಿಯ ವಿರೋಧಿಗಳಂತೂ

ಖಂಡಿತಾ ಅಲ್ಲ. ಇಂದು ಸಾಮಾನ್ಯನಿಗೂ ಭೂಮಿ ಬರಡಾಗುತ್ತಿರುವುದು, ಆಹಾರದಲ್ಲಿ ರುಚಿ-ಸತ್ವ ಎರಡೂ ಇಲ್ಲದಿರುವುದು ಚೆನ್ನಾಗಿಯೇ ತಿಳಿದಿದೆ. ನಾಟಿ ಕೋಳಿ ಮಾಂಸದ ಮತ್ತು ನಾಟಿ ಹಸುಗಳ ಹಾಲಿನ ರುಚಿ ಹಾಗೆಯೆ ಸಗಣಿಯ ಶಕ್ತಿಯೂ ತಿಳಿದಿದೆ. ಎಲ್ಲಿಯವರೆಗೆ ಎಂದರೆ ಘನಘೋರ ವಿಷ ಸುರಿದು ಶುಂಠಿ ಬೆಳೆಯುತ್ತಿರುವ ರೈತ ತಾನು ಅದನ್ನ ತಪ್ಪಿಯೂ ಉಪಯೋಗಿಸುವುದಿಲ್ಲ. ಸ್ವಂತಕ್ಕೆ ತನ್ನ ಜಮೀನಿನ ಮೂಲೆಯಲ್ಲೊಂದಿಷ್ಟು ನಾಟಿ ಶುಂಠಿಯನ್ನು ವಿಷ ಉಣಿಸದೆ ಬೆಳೆದು ಕೊಂಡಿರುತ್ತಾನೆ. ಕೃಷಿ ವಲಯದ ಆರ್ಥಿಕ ಪರಿಸ್ಥಿತಿಯೇ ಅವನನ್ನು ಸುಸ್ಥಿರ-ಸಾವಯವ ಕೃಷಿಯಿಂದ ದೂರವಿರುವಂತೆ ಮಾಡುತ್ತಿದೆ.

ನಮ್ಮ ರೈತರು ಇಂದು ಸಹಜಕೃಷಿಯ ಋಷಿ ಮುನಿಗಳಂತೆ ಬದುಕಲು ಖಂಡಿತಾ ಸಾಧ್ಯವಿಲ್ಲ. ಇಂದು ವಿದ್ಯುತ್, ಫೋನು, ಟಿ.ವಿ, ಸಾಧ್ಯವಾದರೆ ಕನಿಷ್ಠ ಒಂದು ಬೈಕು ಇತ್ಯಾದಿಗಳು ಆತನಿಗೂ ಬೇಕು. ಇಂದು ಟಿ.ವಿ. ಆಧುನಿಕ ಜಗತ್ತನ್ನು ಅವನ ಮನೆಯೊಳಗೇ ತಂದು ತೋರಿಸುತ್ತಾ ಹಲವು ಆಮಿಷಗಳನ್ನು ಒಡ್ಡುತ್ತಿದೆ. ಯಾವುದೇ ಬೆಳೆಯನ್ನು ಬೆಳೆಯುವಾಗ ಎಕರೆವಾರು ಖರ್ಚು ಮತ್ತು ಆದಾಯವನ್ನು ನೋಡಿದರೆ, ಸದ್ಯದಲ್ಲಿ ರಾಸಯನಿಕಗಳನ್ನು ಬಳಸಿ ಮಾಡುವ ಕೃಷಿಯೇ ಅಗ್ಗದ್ದಾಗಿದ್ದು ಸ್ವಲ್ಪಮಟ್ಟಿನ ಲಾಭವನ್ನು ತಂದು ಕೊಡುತ್ತಿದೆ. ಅಲ್ಲದೆ ಅಧಿಕ ಇಳುವರಿ ನೀಡುತ್ತದೆಂದು ಹೇಳಲಾಗುವ ಹೈಬ್ರೀಡ್ ತಳಿಗಳು ರಾಸಾಯನಿಕ ಕೃಷಿಯನ್ನೇ ಅವಲಂಬಿಸಿವೆ. ಶುದ್ಧ ಸಾವಯವವೆಂದು ಪ್ರಮಾಣೀಕರಿಸಿದ ಉತ್ಪನ್ನಗಳಿಗೆ ವಿದೇಶಗಳಲ್ಲಿ ಹೆಚ್ಚಿನ ಬೆಲೆ ದೊರಕುತ್ತದೆಂಬ ವಿಚಾರ ನಮ್ಮ ರೈತರಿಗೂ ತಿಳಿದಿದೆ. ಆದರೆ ಅದನ್ನು ಪ್ರಮಾಣೀಕರಿಸಲು ಇರುವ ವಿಧಿ ವಿಧಾನಗಳು ಮತ್ತು ಅವರ ಮಾನದಂಡಗಳು ಅದಕ್ಕೆ ತಕ್ಕಂತೆ ಅನುಸರಿಸಬೇಕಾದ ಕ್ರಮಗಳು, ಇಡಬೇಕಾದ ಠೇವಣಿಹಣ ಮತ್ತಿತರ ವೆಚ್ಚಗಳು ನಮ್ಮ ರೈತರ ಪಾಲಿಗೆ ತುಂಬಾ ದುಬಾರಿಯಾದುವು.

ಇದನ್ನೆಲ್ಲಾ ನೋಡುತ್ತಾ ನೋಡುತ್ತಾ ನಮ್ಮ ನಿಮ್ಮಂಥ ಸಾಮಾನ್ಯ ಕೃಷಿಕ-ರೈತರು ಮೊದಲಬಾರಿಗೆ ಜಾತ್ರೆಗೆ ಹೋದ ಮಗುವಿನಂತಾಗಿ ಹೋಗಿದ್ದೇವೆ. ಎಲ್ಲವನ್ನೂ ನೋಡುತ್ತಾ ಬೆರಗುಗೊಳ್ಳುತ್ತಾ ಅಪ್ಪ ಕೊಟ್ಟ ಒಂದೇ ಒಂದು ರುಪಾಯಿಯನ್ನು ಜೇಬಿನಲ್ಲಿಟ್ಟುಕೊಂಡು ಕೈಹಾಕಿ ಅಲ್ಲೇ ಮುಟ್ಟಿ ನೋಡಿಕೊಳ್ಳುತ್ತಾ, ಏನನ್ನೂ ಕೊಳ್ಳದೆ, ಏನನ್ನೂ ತಿನ್ನದೆ ಮನೆಗೆ ಬರುವಂತಹ ಸ್ಥಿತಿಯಲ್ಲಿದ್ದೇವೆ.

ಹೀಗಾಗಿ ಒಂದು ವೇಳೆ ಸಾವಯವ ವಿಧಾನದಿಂದ ಬೆಳೆ ಬೆಳೆದರೂ ಸಹ ಇದರಿಂದ ಲಾಭ ಪಡೆಯುವ ಸ್ಥಿತಿಯಲ್ಲಿ ರೈತರು ಖಂಡಿತಾ ಇಲ್ಲ. ಆದ್ದರಿಂದ ಎಲ್ಲ ತೊಂದರೆಗಳ ಅರಿವಿದ್ದರೂ ಹೆಚ್ಚು ಲಾಭ ಬರಬಹುದೆಂಬ ಆಸೆಯಿಂದ ರಾಸಾಯನಿಕಗಳನ್ನು ಬಳಸಿ ಮಾಡುವ ಆಧುನಿಕ ಕೃಷಿಯತ್ತ ವಾಲುತ್ತಾರೆ.

ಇನ್ನೊಂದು ಕುತೂಹಲಕಾರಿ ಅಂಶವೆಂದರೆ, ನಾನು ಕೇವಲ ಕುತೂಹಲಕ್ಕಾಗಿ ನನಗೆ ಗೊತ್ತಿರುವ ಹಾಗೂ ಕೃಷಿ ಪತ್ರಿಕೆಗಳಲ್ಲಿ ಮತ್ತು ಇತರ ಪತ್ರಿಕೆಗಳ ಕೃಷಿ ವಿಭಾಗಗಳಲ್ಲಿ ಪರಿಚಯಿಸಲಾಗುತ್ತಿರುವ ಸಾವಯವ ಕೃಷಿಕರ ಬಗ್ಗೆ ಕೆಲವು ಮಾಹಿತಿಗಳನ್ನು ಸಂಗ್ರಹಿಸುತ್ತಾ ಹೋದೆ. ನನಗೆ ಕಂಡುಬಂದ ಅಂಶವೆಂದರೆ ನಾನು ಮಾಹಿತಿ ಸಂಗ್ರಹಿಸಿದ ೫೫ಜನ ಸಾವಯವ ಕೃಷಿಕರಲ್ಲಿ ೫೬೬ಜನ ಅಂದರೆ

ಶೇ.೭೫ರಷ್ಟು ಮಂದಿ ಜೀವನ ನಿರ್ವಹಣೆಗಾಗಿ ಕೃಷಿಯೊಂದನ್ನೇ ಅವಲಂಬಿಸಿರಲಿಲ್ಲ. ಇವರಲ್ಲಿ ಹೆಚ್ಚಿನವರು ಬೇರೆ ಬೇರೆ ವೃತ್ತಿಗಳನ್ನು ಅವಲಂಬಿಸಿದವರಾಗಿದ್ದರು. ಇತರ ಕೆಲವರು ಕೃಷಿಯನ್ನು ಅವಲಂಬಿಸಿದ್ದರೂ ಸಹ ಅವರಿಗೆ ಸಾಕಷ್ಟು ಕೃಷಿಯೇತರ ಆದಾಯವೂ ಇತ್ತು. ಒಂದು ವೇಳೆ ಕೃಷಿ ಕೈಕೊಟ್ಟರೂ ಸಹ ಇವರ ಹೊಟ್ಟೆಪಾಡಿಗೆ ತೊಂದರೆ ಏನೂ ಆಗುವಂತಿರಲಿಲ್ಲ. ಕೇವಲ ಮೂರು ಮಂದಿ ಮಾತ್ರ ಶುದ್ಧ ಸಾವಯವ ಕೃಷಿಕರಾಗಿದ್ದು ಸಾಮಾನ್ಯ ಮಟ್ಟದ ಅಂದರೆ ಶ್ರೀಮಂತಿಕೆಯದಲ್ಲದ ಜೀವನ ನಿರ್ವಹಿಸುತ್ತಿದ್ದರು.

ಈ ನನ್ನ ಅಭಿಪ್ರಾಯ ಹೆಚ್ಚಿನ ಪರಿಶೀಲನಗೆ ಯೋಗ್ಯವೆಂದು ನನ್ನ ಭಾವನೆ.

ನಮ್ಮ ಸಮಾಜದ ಒಟ್ಟು ಆರ್ಥಿಕ ಸಂಬಂಧಗಳನ್ನು ಪರಿಗಣಿಸದೆ, ಸುಮ್ಮನೆ ನೆಲ-ಜಲ ಪರಿಸರಗಳ ಬಗ್ಗೆ ಎಷ್ಟು ಒಳ್ಳೆಯ ಹಂಬಲಗಳಿದ್ದರೂ ಸಹ ಅದು ಆಚರಣೆಗೆ ಬರಲಾರದು ಎನ್ನುವುದಕ್ಕೆ ಇನ್ನೊಂದು ಉದಾಹರಣೆ ಕೊಡುತ್ತೇನೆ. ಈಗ ಎಲ್ಲ ಕಡೆಗಳಲ್ಲೂ ಟೀಕೆಗೆ ಗುರಿಯಾಗುತ್ತಿರುವ ಇನ್ನೊಂದು ವಿಚಾರವೆಂದರೆ ಹಳ್ಳಿಯ ಜನ ಹಸುಗಳನ್ನು ಮಾರಿ ಪ್ಯಾಕೆಟ್ ಹಾಲಿಗೆ ಮಾರುಹೋಗಿದ್ದಾರೆಂದು. ಆದರೆ ಹಳ್ಳಿಯ ಜನರಿಗೆ ಶುದ್ಧ ಹಾಲಿನ ಶುದ್ಧ ತರಕಾರಿಯ ಜೊತೆಗೆ ನಾಟಿ ಕೋಳಿಯ ರುಚಿಗೊತ್ತಿಲ್ಲದೆ ಅಲ್ಲ. ಬೇರೆಲ್ಲ ಕಡೆಗಳಿಗಿಂತಲೂ ಮಲೆನಾಡಿನಲ್ಲಿ ಕೂಡ ದನಕರುಗಳನ್ನು ಸಾಕುವುದು ಎತ್ತುಗಳಿಂದ ಉಳುವುದು ದುಬಾರಿ ಎನಿಸಿದೆ. ಹಸು ಕೊಡುವ ಹಾಲಿನ ಪ್ರಮಾಣ ಅದಕ್ಕೆ ಸಿಗುವ ಮಾರುಕಟ್ಟೆ ಬೆಲೆ ಅದ-ಕ್ಕೆ ವ್ಯಯಿಸಬೇಕಾದ ಶ್ರಮ-ಹಣ, ಮತ್ತು ಅದಕ್ಕೆ ಬೇಕಾದ ಕೆಲಸಗಾರರ ಅಭಾವ ಜನರನ್ನು ಪ್ಯಾಕೆಟ್ ಹಾಲಿನತ್ತ ದೂಡಿದೆ.

ಹಿಂದಿನ ಕಾಲದಂತೆ ರೈತರು ತಮಗೆ ಬೇಕಾದ ಆಹಾರ, ತರಕಾರಿ, ಹಾಲು, ಮಾಂಸ, ಹಣ್ಣು-ಹಂಪಲು ಎಲ್ಲವನ್ನು ತಾವೇ ಬೆಳೆದುಕೊಳ್ಳುತ್ತಾ, ತಮ್ಮ ಅಗತ್ಯಕ್ಕೆ ಹೆಚ್ಚಿನದನ್ನು ಮಾರುತ್ತಾ ಬದುಕುವುದು ಇಂದಿನ ಆರ್ಥಿಕತೆಗೆ ಒಗ್ಗುವ ಸಂಗತಿಯಾಗಿ ಉಳಿದಿಲ್ಲ. ಇಂದು ಮಾರುಕಟ್ಟೆಯಲ್ಲ ಮಾರಾಟ ಮಾಡಲು ಸಾಧ್ಯವಾಗುವಂತೆ ಪ್ರತಿಯೊಂದನ್ನು ದೊಡ್ಡ ಪ್ರಮಾಣದಲ್ಲಿ 'ಉತ್ಪಾದಿಸುವುದು' ಅನಿವಾರ್ಯವಾಗುವಂಥ ಸನ್ನಿವೇಶ ಸೃಷ್ಟಿಯಾಗಿದೆ. ಆದ್ದರಿಂದ ತರಕಾರಿ ಬೆಳೆಯುವವರು, ಮೆಣಸಿನಕಾಯಿ ಬೆಳೆಯುವವರು, ಶುಂಠಿ ಬೆಳೆಯುವವರು, ಹೈನೋದ್ಯಮದವರು, ಕೋಳಿಫಾರಂಗಳು, ಹೀಗೆ ಎಲ್ಲವೂ ಸಣ್ಣ ಪ್ರಮಾಣದಿಂದ ನಿಧಾನವಾಗಿ ದೊಡ್ಡ ಪ್ರಮಾಣಕ್ಕೆ ಬೆಳೆಯುತ್ತಿದೆ. ಗ್ರಾಹಕರ ಬೇಡಿಕೆಗೆ ತಕ್ಕಂಥ ಉತ್ಪಾದನೆ, ಸ್ಫರ್ಧಾತ್ಮಕ ಬೆಲೆಗಳು, ಬ್ರಾಂಡೆಡ್ ಉತ್ಪಾದನೆ ಇತ್ಯಾದಿಗಳ ಜಾಗತೀಕರಣದ ಉನ್ಮಾದದ ಮಾರುಕಟ್ಟೆಯಲ್ಲಿ ಹೆಚ್ಚು ಹೆಚ್ಚು 'ಉತ್ಪಾದನೆ'ಯ ಒತ್ತಡಕ್ಕೊಳಗಾದ ಕೃಷಿಕ ಸಾವಯವ ಕೃಷಿಯತ್ತ ತಿರುಗಿ ನೋಡುವುದೂ ಇಲ್ಲ. ದ್ವೀಪಗಳಂತೆ ಅಲ್ಲಲ್ಲಿ ಕೆಲವು ಸ್ಥಳಗಳಲ್ಲಿ ಕೆಲವು ವಸ್ತುಗಳನ್ನು-ಅದೂ ಮುಖ್ಯ ಆಹಾರ ಪದಾರ್ಥಗಳನ್ನಲ್ಲ, ಅವುಗಳಿಗೆ ಅಸಾಮಾನ್ಯ ಕೆಲವೊಮ್ಮೆ ಊಹೆಗೂ ನಿಲುಕದಂತಹ ಹೆಚ್ಚಿನ ಬೆಲೆ ಬಂದಾಗ ಸಾವಯವ ವಿಧಾನದಲ್ಲಿ ಬೆಳೆ ಬೆಳೆಯಲು ತೊಡಗಬಲ್ಲರು. ಉದಾ; ವೆನಿಲಾ, ಆ್ಯಂತೋರಿಯಂ ನಂತಹ ರಫ್ತು

ಆಧಾರಿತ ಬೆಳೆಗಳು.

ಸಹಜಕೃಷಿಯ ವಸ್ತುಗಳು ಮಾರುಕಟ್ಟೆಯಲ್ಲಿ ಇತರ ಉತ್ಪನ್ನಗಳಿಗಿಂತ ಕಡಿಮೆ ಬೆಲೆಯಲ್ಲಿ ಲಭ್ಯವಾಗಬೇಕೆಂದು 'ಫುಕುವೊಕಾ' ಹೇಳುತ್ತಾರೆ. ಆದರೆ ಸದ್ಯದ ಪರಿಸ್ಥಿತಿಯಲ್ಲಿ ಸಹಜ-ಸಾವಯವಗಳಂತಹ ಯಾವ ಪದ್ಧತಿಯ ಉತ್ಪನ್ನಗಳೂ ಕೂಡ ಬೆಲೆಯಲ್ಲಿ ಇತರ ಉತ್ಪನ್ನಗಳೊಂದಿಗೆ ಸ್ಪರ್ಧಿಸಲಾರವು. ಒಂದು ವೇಳೆ ಇವುಗಳನ್ನೆಲ್ಲವನ್ನೂ ಮೀರಿ ಸಾವಯವ ಕೃಷಿ ಮಾಡುವ ಉಮೇದಿನಲ್ಲಿರುವ ಕೃಷಿಕ ಹೊರಗಿನಿಂದ ಕೋಳಿ ಗೊಬ್ಬರವನ್ನೋ ಕೊಟ್ಟಿಗೆ ಗೊಬ್ಬರವನ್ನೋ ಖರೀದಿಸಿ ಉಪಯೋಗಿಸ ಬಯಸಿದರೆ ಇಂದು ಅದರಲ್ಲಿ ಬೆರೆತಿರುವ ರಾಸಾಯನಿಕಗಳು ಮತ್ತು ಹಾರ್ಮೋನುಗಳ ಪ್ರಮಾಣ ಅಪಾಯಕಾರಿ ಮಟ್ಟದಲ್ಲಿದೆ. ಯಾಕೆಂದರೆ ಹಾಲು, ಮೊಟ್ಟೆ, ಮಾಂಸದ ಅಧಿಕ ಇಳುವರಿಗಾಗಿ ಈ ಪ್ರಾಣಿಗಳಿಗೆ ತಿನ್ನಿಸಿದ ಆಹಾರ, ಕೊಡುವ ಔಷಧಿ-ಇಂಜಕ್ಷನ್‌ಗಳನ್ನು ನೋಡಿದರೆ ಗಾಬರಿಯಾಗುವಂತಿದೆ. ಇತ್ತೀಚೆಗೆ ಆ್ಯಂತೋರಿಯಂ ಬೆಳೆ ಆರಂಭಿಸಿದ ಕೃಷಿಕರೊಬ್ಬರು ಕೋಳಿ ಗೊಬ್ಬರ ಬಳಸಿ ಅದರಿಂದಾಗಿ ಸಾವಿರಾರು ಗಿಡಗಳನ್ನು ಕಳೆದುಕೊಂಡರು. ಪರೀಕ್ಷಿಸಿದಾಗ ಅವರ ಬಳಸಿದ ಕೋಳಿ ಗೊಬ್ಬರವೇ ಸೋಂಕಿನಿಂದ ವಿಷಮಯವಾಗಿತ್ತು. ಉಳಿದ ಗಿಡಗಳನ್ನು ಉಳಿಸಿಕೊಳ್ಳಲು ಮತ್ತೊಂದಷ್ಟು ವಿಷನಿವಾರಕಗಳನ್ನು ಸುರಿಯುವುದು ಅನಿವಾರ್ಯವಾಯಿತು.

ನಾನು ಇದನ್ನೆಲ್ಲಾ ಮತ್ತೆ ಮತ್ತೆ ಯಾಕೆ ಹೇಳುತ್ತಿದ್ದೇನೆಂದರೆ ನಮ್ಮ ಕೃಷಿ ವಿಷಮಯವಾಗುತ್ತಾ ಹೋದಂತೆ ನೆಲ-ಜಲಗಳೂ ಜೊತೆಯಲ್ಲಿ ವಾತಾವರಣವೂ ವಿಷಮಯವಾಗುತ್ತಾಹೋಗುತ್ತದೆ. ಇದಕ್ಕೆ ಪರಿಹಾರ ಕಂಡುಹಿಡಿಯಲು ಸಮಗ್ರವಾದ, ಅಂದರೆ ನಮ್ಮ ಕೃಷಿ ಪದ್ಧತಿಗಳು, ಕೈಗಾರಿಕೋದ್ಯಮಗಳು, ನಮ್ಮ ಸಾಮಾಜಿಕ-ಸಾಂಸ್ಕೃತಿಕ ಸಂಬಂಧಗಳು ಇವುಗಳನ್ನೆಲ್ಲ ಗಮನಿಸಿ ರೂಪಿಸಲಾಗುವ ನೀತಿಯೊಂದು ಇಡಿ ಜಗತ್ತಿಗೇ ಅನ್ವಯವಾಗುವಂತೆ ಇರದಿದ್ದರೆ, ಅಥವಾ ಪ್ರತಿಯೊಂದು ಸಮಸ್ಯೆಯನ್ನು ಪ್ರತ್ಯೇಕವಾಗಿ ಪರಿಗಣಿಸಿ ಪರಿಹಾರ ಹುಡುಕಲು ಪ್ರಯತ್ನಿಸದೆ ಹುತ್ತವ ಬಡಿದಷ್ಟೆ ಫಲ ದೊರೆತೀತು.

ಕೃಷಿಯಲ್ಲಿ ಯಾವುದೇ ಹೊಸ ಬದಲಾವಣೆಯನ್ನು ಮಾಡುವುದು ಅಥವಾ ಹೊಸ ವಸ್ತುವನ್ನು ಬಳಕೆ ಮಾಡುವುದನ್ನು ಆರಂಭಿಸುವುದಾದರೆ, (ಇದು ಪ್ರಕೃತಿಯ ಎಲ್ಲ ಜೀವರಾಶಿಗಳ ವಿಚಾರದಲ್ಲು ಅನ್ವಯವಾಗುತ್ತದೆ) ಅದಕ್ಕೆ ಹಲವು ವರ್ಷಗಳ ತಾಳ್ಮೆಯ ಅಧ್ಯಯನ, ಪ್ರಯೋಗ ಮತ್ತು ವಸ್ತುನಿಷ್ಠ ಮೌಲ್ಯಮಾಪನದ ಅಗತ್ಯವಿದೆ. ಬಹುವಾರ್ಷಿಕ ಬೆಳೆಗಳ ವಿಚಾರದಲ್ಲಂತೂ ಇದು ಹೆಚ್ಚು ಅಗತ್ಯ. ಯಾಕೆಂದರೆ ಬಹುವಾರ್ಷಿಕ ಬೆಳೆಗಳ ಮೇಲೇನಾದರೂ ಪ್ರತಿಕೂಲ ಪರಿಣಾಮವಾದರೆ ಸರಿಪಡಿಸಿಕೊಳ್ಳಲು ವರ್ಷಗಳೇ ಬೇಕು. ಆದ್ದರಿಂದ ಈ ಕಂಪನಿಗಳು ಮತ್ತವರ ಮಾರಾಟಗಾರರು ಹೇಳಿದ್ದನ್ನೇ ನಂಬಿಕೊಂಡು ಕೂರದೆ, ಯಾವುದೇ ಹೊಸ ಪದ್ಧತಿಯನ್ನೋ, ಹೊಸವಸ್ತುವನ್ನೋ ಬಳಸುವುದು ಅನಿವಾರ್ಯವಾದಾಗ ಇಲ್ಲವೇ ಹೊಸ ಪ್ರಯೋಗ ಮಾಡುವಾಗ ಸಣ್ಣ ಪ್ರಮಾಣದಲ್ಲಿ-ಸಣ್ಣಪ್ರದೇಶದಲ್ಲಿ ಪ್ರಯೋಗಮಾಡಿ ನೋಡುವುದು ಒಳ್ಳೆಯದು.

ನಮ್ಮ ಜಿಲ್ಲೆಯ ದೊಡ್ಡ ಕಾಫಿ ತೋಟವೊಂದರ ಮ್ಯಾನೇಜರ್ ಒಬ್ಬರು ವಿದೇಶಕ್ಕೆ-ಕಾಫಿ ಬೆಳೆಯುವ ದೇಶಗಳಿಗೆ ಹೋದರು. ವರ್ಷವಿಡೀ ಮಳೆ ಬೀಳುವ ಹೆಚ್ಚುಕಾಲ ಮೋಡದ ವಾತಾವರಣವಿರುವ ಆಫ್ರಿಕಾ ಹಾಗೂ ದಕ್ಷಿಣ ಅಮೇರಿಕಾ ದೇಶಗಳ ಕೆಲವು ಭಾಗಗಳಲ್ಲಿ ಕಾಫಿಯನ್ನು ನೆರಳಿಲ್ಲದೆ ಬಯಲಿನಲ್ಲಿ ಬೆಳೆಯುತ್ತಾರೆ. ಅದನ್ನು ನೋಡಿದ ಮ್ಯಾನೇಜರ್ ಸಾಹೇಬರು ಇಲ್ಲಿ ಬಂದು 'ಕಾಫಿಗೆ ನೆರಳಿನ ಅಗತ್ಯವೇ ಇಲ್ಲ. ಮರಗಳನ್ನು ಕಡಿಸಿದರೆ ತೋಟ ನಿರ್ವಹಣೆಯ ಖರ್ಚಿನಲ್ಲಿ ಎಷ್ಟೋ ಉಳಿತಾಯವಾಗುತ್ತದೆ' ಎಂದು ವರ್ಷದಲ್ಲಿ ೪-೫ ತಿಂಗಳು ಮಾತ್ರವೇ ಮಳೆ ಬೀಳುವ ನಮ್ಮ ಈ ಪ್ರದೇಶದಲ್ಲಿನ ತೋಟದ ಮರಗಳನ್ನೆಲ್ಲಾ ಕಡಿಸಿದರು! ತೋಟ ಸಂಪೂರ್ಣವಾಗಿ ನಾಶವಾಯ್ತು. ಮತ್ತೊಮ್ಮೆ ನೆರಳು ಮರಗಳನ್ನು ನೆಟ್ಟು ಬೆಳಸಿ ಹಲವು ವರ್ಷಗಳ ನಂತರ ಈಗ ಅಲ್ಲಿ ತೋಟ ಎಬ್ಬಿಸಿದ್ದಾರೆ. ಭಾರತದ ಕಾಫಿ ತೋಟಗಳ ಚರಿತ್ರೆಯನ್ನವರು ಸ್ವಲ್ಪ ಅಭ್ಯಾಸ ಮಾಡಿದ್ದರೆ, ಈ ಹಿಂದೆಯೇ ಕೊಡಗಿನಲ್ಲಿ ಅಂದರೆ ಈ ಶತಮಾನದ ಆದಿಭಾಗದಲ್ಲೇ ಕೆಲವರು ಬ್ರಿಟಿಷ್ ಕಾಫಿ ಬೆಳೆಗಾರರು ಈ ಪ್ರಯೋಗ ಮಾಡಿ ಕೈಸುಟ್ಟುಕೊಂಡದ್ದು ತಿಳಿಯುತ್ತಿತ್ತು.

ಹೀಗೆ ನಮ್ಮ ಹಿರಿಯರು ಇಷ್ಟು ವರ್ಷಗಳಿಂದ ಏನೇನು ಪದ್ಧತಿಗಳನ್ನು ಅಳವಡಿಸಿಕೊಂಡಿದ್ದಾರೆ, ಈ ಪದ್ಧತಿಗಳು ಯಾಕೆ ಸ್ಥಳದಿಂದ ಸ್ಥಳಕ್ಕೆ ಭಿನ್ನವಾಗಿವೆ? ಎಂದೆಲ್ಲಾ ಯೋಚಿಸದೆ ನಮ್ಮ ಪಾರಂಪರಿಕ ಜ್ಞಾನವನ್ನೆಲ್ಲಾ ಕಡೆಗಣಿಸಿ ನಮ್ಮ ಹಿರಯರಿಗೆಲ್ಲ ಬುದ್ಧಿಯೇ ಇರಲಿಲ್ಲವೆಂದುಕೊಂಡು ಏನೇನೋ ಮಾಡಹೊರಟರೆ ಅನಾಹುತ ತಪ್ಪಿದ್ದಲ್ಲ.

ನನ್ನ ಅನುಮಾನ ನಿಜವಾಗುತ್ತಿದೆ. ಸರ್ಕಾರ ಸಾವಯವ ಕೃಷಿ ಅಭಿವೃದ್ಧಿಗಾಗಿ ಒಂದು ಯೋಜನೆಯನ್ನು ಸಿದ್ಧಪಡಿಸಿ ಪ್ರತಿ ಜಿಲ್ಲೆಗೊಂದು ಸಂಘಟನೆ ಅಥವಾ ವ್ಯಕ್ತಿಗಳಿಗೆ ಇದನ್ನು ಕಾರ್ಯಗತಗೊಳಿಸುವ ಜವಾಬ್ದಾರಿಯನ್ನು ವಹಿಸಲಿದೆಯೆಂದು ಸುದ್ದಿಬಂದಿದೆ. ಈ ವ್ಯಕ್ತಿಗಳ ಅಥವಾ ಸಂಘಟನೆಗಳ ಆಯ್ಕೆಗೆ ಸರ್ಕಾರ ಯಾವ ಮಾನದಂಡ ಬಳಸಿದೆಯೆಂದು ಗೊತ್ತಿಲ್ಲ. ಈ ಸಂಸ್ಥೆ ಅಥವಾ ವ್ಯಕ್ತಿಗಳು ಸುಮಾರು ಐದು ನೂರು ಎಕರೆ ವಿಸ್ತೀರ್ಣ ಕೃಷಿಭೂಮಿ ಇರುವಂತಹ ಗ್ರಾಮವೊಂದನ್ನು ಆಯ್ಕೆ ಮಾಡಿಕೊಂಡು ಸಾವಯವ ಕೃಷಿಗೆ ಒಳಪಡಿಸಿ ಅಧ್ಯಯನ, ಪ್ರಚಾರ ಇತ್ಯಾದಿಗಳಲ್ಲಿ ತೊಡಗುವುದು ಈ ಯೋಜನೆಯ ಉದ್ದೇಶ. ಈ ತಲೆಕೆಳಗಾದ ಯೋಜನೆಗೆ ಸಲಹೆ ನೀಡಿದವರು ಯಾರೋ ತಿಳಿಯದು.

ಸರ್ಕಾರ ನಿಜವಾದ ಕಾಳಜಿ ಇದ್ದರೆ ಈ ರೀತಿ ಪ್ರತಿಜಿಲ್ಲೆಯಲ್ಲೂ ಪ್ರಯೋಗ ನಡೆಸಬೇಕಾದ್ದು ಸಾವಯವ ಕೃಷಿಯ ಬಗ್ಗೆ ಅಲ್ಲ. ಒಂದಷ್ಟು ಜನ ವಿಜ್ಞಾನಿಗಳು, ಪರಿಸರ ತಜ್ಞರು, ಆರ್ಥಿಕ ತಜ್ಞರು, ಆಡಳಿತಗಾರರು, ಜೊತೆಗೆ ಖಡ್ಡಾಯವಾಗಿ ಕೆಲವರು ಪಾರಂಪರಿಕ ಕೃಷಿಕರು ಇವರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಿ, ಆ ಸಮಿತಿಯ ಉಸ್ತುವಾರಿಯಲ್ಲಿ ಆಧುನಿಕ ಕೃಷಿಯ ಬಗ್ಗೆ, ಅದರ ಒಳಸುಳಿಗಳ ಬಗ್ಗೆ ವಸ್ತುನಿಷ್ಠವಾದ ಅಧ್ಯಯನ ಮಾಡಿ ಮೌಲ್ಯಮಾಪನ ನಡೆಸಿ, ಹೊಸತಳಿಗಳು ಕೃಷಿವಿಷಗಳು ಇನ್ನಿತರ ಯಾವುದೇ ಒಳಸುಳಿಗಳಿಗೆ ಸಾವಯವ ಪರ್ಯಾಯಗಳನ್ನು ಹುಡುಕಬೇಕು. ಇನ್ನೊಂದು ಮುಖ್ಯವಾದವಿ ಚಾರವೆಂದರೆ ಈಗ ಸಾವಯವ,

ಪರಿಸರಸ್ನೇಹಿ, ಆಯುರ್ವೇದ ಇತ್ಯಾದಿ ಹೆಸರುಗಳಲ್ಲಿ ಬರುತ್ತಿರುವ ವಸ್ತುಗಳ ಬಗ್ಗೆಯೂ ಮೌಲ್ಯಮಾಪನ ನಡೆಸಿ ಅದರ ಗುಣಾವಗುಣಗಳ ಬಗ್ಗೆ ಸ್ಪಷ್ಟ ಮಾಹಿತಿ ನೀಡಬೇಕು. ಹೀಗೆ ಬೇರೆ ಬೇರೆ ಜಿಲ್ಲೆಗಳಲ್ಲಿ ಒಂದೇ ವಸ್ತುವಿನ ಬಗ್ಗೆ ನಡೆಸಿದ ಪ್ರಯೋಗಗಳಲ್ಲಿ ಭಿನ್ನವಾದ ಅಭಿಪ್ರಾಯಗಳಿದ್ದರೆ, ಇನ್ನೂ ಹೆಚ್ಚಿನ ಪ್ರಯೋಗಕ್ಕೆ ಒಳಪಡಿಸಬೇಕು. ಈ ಎಲ್ಲ ಪ್ರಯೋಗಗಳ ವಿವರಗಳು ಕೃಷಿಕರಿಗೆ ಲಭ್ಯವಾಗಬೇಕು. ಈ ಪ್ರಕ್ರಿಯೆ ನಿರಂತರವಾಗಿದ್ದು ಆಧುನಿಕ ಜ್ಞಾನವನ್ನು ಪಾರಂಪರಿಕ ಜ್ಞಾನದೊಂದಿಗೆ ಮೇಳೈಸಿ ನಮ್ಮ ಕೃಷಿ ಪದ್ಧತಿಗಳಿಂದ ಪರಿಸರದ ಮೇಲಾಗುವ ಹಾನಿಯನ್ನು ಕನಿಷ್ಠ ಮಟ್ಟಕ್ಕಿಳಿಸುವ ಪ್ರಯತ್ನ ನಿರಂತರವಾಗಬೇಕು.

ಈ ಕಾರ್ಯದಲ್ಲಿ ನಮ್ಮಲ್ಲಿ ದೊಡ್ಡ ಸಂಖ್ಯೆಯಲ್ಲಿರುವ ಕೃಷಿ ವಿಜ್ಞಾನ ಕೇಂದ್ರಗಳು ಇದರೊಂದಿಗೆ ಸೇರಿ ಕೆಲಸ ಮಾಡಿ ಸರಿಯಾದ ಮಾಹಿತಿ ನೀಡುವಂತೆ ಸಾರ್ವಜನಿಕರು ಸರ್ಕಾರದ ಮೇಲೆ ಮತ್ತು ಈ ವಿಜ್ಞಾನ ಕೇಂದ್ರಗಳ ಮೇಲೆ ಒತ್ತಡ ತರಬೇಕು.

ಈ ರೀತಿಯಲ್ಲಿ ಸಂಶೋಧನಾ ಕೇಂದ್ರಗಳನ್ನೊಳಗೊಂಡ ಸಮಿತಿಯಿಂದ ಮೌಲ್ಯಮಾಪನವಾಗದ ಯಾವುದೇ ಹೊಸ ವಸ್ತುವನ್ನು ಮಾರಾಟಕ್ಕೆ-ಬಳಕೆಗೆ ತರಬಾರದು. ಅನಂತರವೂ ಬಳಕೆಯ ಸಂದರ್ಭದಲ್ಲಿ ಏನಾದರೂ ತೊಂದ-ರೆ ಕಂಡು ಬಂದರೆ ಅದನ್ನು ತಯಾರಿಸಿದ ಕಂಪೆನಿ ಮತ್ತು ಮೌಲ್ಯಮಾಪನ ಮಾಡಿದ ಸಂಸ್ಥೆಗಳನ್ನು ಜವಾಬ್ದಾರರನ್ನಾಗಿ ಮಾಡಬೇಕು. ಹಾಗಾದಲ್ಲಿ ಭೂಮಿಗೆ ವಿಷವುಣಿಸುವ ಪ್ರಮಾಣ ಸ್ವಲ್ಪಮಟ್ಟಿಗೆ ನಿಯಂತ್ರಣಕ್ಕೆ ಬಂದೀತು.

ಸರ್ಕಾರ ಈಗ ಮಾಡುತ್ತಿರುವ ಯೋಜನೆ ಕೇವಲ 'ಶೋಕೇಸ್'ನಲ್ಲಿಟ್ಟ ಸಾವಯವ ಕೃಷಿ ಆದೀತು. ನಗರ ಮಧ್ಯದ ರೆಸಾರ್ಟ್‌ಗಳಲ್ಲಿ ಹಾಕಿದ ಹಳ್ಳಿಯ ಸೆಟ್‌ನಂತೆ ಅಥವಾ ಇತ್ತೀಚೆಗೆ ಕೃಷಿಮೇಳಗಳಲ್ಲಿ ಕಾಣಸಿಗುವ 'ಭತ್ತಕುಟ್ಟುವುದು, ಮೊರದಲ್ಲಿ ಕೇರುವುದು, ರಾಟಾಳ ಯಂತ್ರದಲ್ಲಿ ಮರಗೆಲಸ' ಇತ್ಯಾದಿಗಳನ್ನೊಳಗೊಂಡು ಜಾತ್ರೆಸ್ಟಾಲ್‌ಗಳಂತೆ ಕಂಗೊಳಿಸಿ ಮತ್ತೊಂದಷ್ಟು ಸರ್ಕಾರಿ ಪರಿಸರ ಪ್ರಿಯರನ್ನು ಹುಟ್ಟುಹಾಕಲು ನೆರವಾದೀತು.

* * *

ಕರ್ನಾಟಕ ಸಂಗೀತ ವಿದುಷಿ : ಎಚ್.ವಿ.ಶಾಂತ

ಕನ್ನಡ ಅಧ್ಯಾಪಕಿ ಓರ್ವರು ಕರ್ನಾಟಕ ಸಂಗೀತದಲ್ಲಿ ಪ್ರಬುದ್ಧತೆ ಸಾಧಿಸಿರುವುದು ವಿಶೇಷ ಸಂಗತಿ. ಸಂಗಿತವಲ್ಲದೆ ತಮಿಳು ಭಾಷೆಯಲ್ಲಿ ಡಿಪ್ಲೊಮ ಪಡೆದು ತಮಿಳು ವಾಗ್ಗೇಯಕಾರ ಉತ್ಕಾಡು ವೆಂಕಟ ಅಯ್ಯರ್ ಅವರ ಕೃತಿಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿದ್ದಾರೆ. ಕನ್ನಡದಲ್ಲಿ ಅಲಭ್ಯವಾಗಿದ್ದ ಆ ಕೊರತೆಯನ್ನು ನೀಗಿಸಿದ್ದಾರೆ. ಭಾರತೀಯ ತತ್ವಶಾಸ್ತ್ರದಲ್ಲಿ ಡಿಪ್ಲೊಮ ಮಾಡಿದ್ದಾರೆ. ಸಂಗೀತದ ನಿರಂತರ ಹವ್ಯಾಸ ಇಟ್ಟುಕೊಂಡು ಸಂಗೀತದ ವಿದೂಷಿಯಾಗಿ ರೂಪಗೊಂಡಿರುವ ಶ್ರೀಮತಿ ಶಾಂತ ತಮ್ಮ ಸ್ನೇಹಪರತೆ, ಸಾಹಿತ್ಯಾಸಕ್ತಿ ಹಾಗೂ ಗೃಹಿಣಿಯಾಗಿ ನಿರ್ವಹಿಸುವ ಕರ್ತವ್ಯ ಇತ್ಯಾದಿಗಳಿಂದ ಶಾಂತರವರು ಮೈಸೂರು ನಗರದ ಸಾಂಸ್ಕೃತಿಕ ಕ್ಷೇತ್ರದಲ್ಲಿ ಹೆಸರು ಮಾಡಿರುವ ಮಹಿಳೆ. ಇವರ ಅಭಿರುಚಿಯ ಕ್ಷೇತ್ರ ಸಂಗೀತಕ್ಕೆ ಮಾತ್ರ ಸೀಮಿತಗೊಳ್ಳದೆ ಆಕಾಶವಾಣಿಗೆ ಸಂಗತವಾಗುವಂಥ ಚಟುವಟಿಕೆಗಳು ಸಹ ಇವರ ಅಭಿರುಚಿಯ ಕ್ಷೇತ್ರಗಳಾಗಿವೆ. ಆಕಾಶವಾಣಿಯ ಮೂಲಕ ಚಿಂತನಗಳು ಬಿತ್ತರಗೊಂಡಿವೆ, ಸಂಗೀತ ರೂಪಕಗಳು ಪ್ರಸಾರವಾಗಿವೆ. ಅವುಗಳಲ್ಲಿ 'ಪುರಂದರದಾಸ', 'ಶ್ರೀಕೃಷ್ಣದರ್ಶನ', 'ವಂದಿಪೆನಿನಗೆ ಗಣನಾಥ' ಇತ್ಯಾದಿಗಳನ್ನು ಹೆಸರಿಸಬಹುದು. ಇವರ ಸಾಹಿತ್ಯಾಸಕ್ತಿಗೆ ಇವರ ತಂದೆ ತಾಯಿಗಳು ನೀರೆರೆದಿದ್ದರೆ, ಪ್ರೊ.ವೆಂಕಟರಾಮಪ್ಪ, ಪ್ರೋ.ಡಿ.ಎಲ್.ನರಸಿಂಹಾಚಾರ್, ಪ್ರೋ.ಹಾ.ಮಾ.ನಾಯಕ್, ಡಾ.ಪ್ರಭುಶಂಕರ ಮತ್ತು ವರದರಾಜರಾವ್ ಮುಂತಾದವರು ಅವರ ಸಾಹಿತ್ಯಶಕ್ತಿಯನ್ನು ಪೋಷಿಸಿದ್ದಾರೆ. ಈ ಸಾಹಿತ್ಯ ದಿಗ್ಗಜರನ್ನು ಶಾಂತರವರು ಕೃತಜ್ಞತಾಪೂರ್ವಕವಾಗಿ ಸದಾ ಸ್ಮರಿಸುತ್ತಿರುತ್ತಾರೆ. ಸಂಗೀತದ ವಿಷಯದಲ್ಲಿಯೂ ಅಷ್ಟೆ. ತಮ್ಮ ಅಮ್ಮನಿಂದ ಮನೆಯಲ್ಲಿ ಸಂಪ್ರದಾಯದ ಹಾಡುಗಳ ಮೂಲಕ ಸಂಗೀತಪಾಠ ಆರಂಭಿಸಿದರು. ಸಂಗೀತದ ಈ ಅಧ್ಯಯನ ಮುಂದೆ ಮೈಸೂರು ವಿಶ್ವವಿದ್ಯಾನಿಲಯದ ಸಂಗೀತ ಡಿಪ್ಲಮೊ ಪಡೆಯಲು ಕಾರಣವಾಯಿತು. ನಂತರ ಶಾಂತರವರ ಸಂಗೀತ ಆಸಕ್ತಿ ಬೆಳೆಯುತ್ತಾಹೋಯಿತು. ಆಗ ಅವರ ಸಂಗೀತ ಆಸಕ್ತಿಗೆ ನೆರವಾದವರು ಸಂಗೀತ ವಿದ್ವಾಂಸ ಸಿ.ರಂಗಯ್ಯನವರು, ವಿದುಷಿ ಡಾ.ಪದ್ಮಾಶಾಸ್ತ್ರಿ, ವಿದುಷಿ ಗೌರಿಕುಪ್ಪಸ್ವಾಮಿ, ಎಮ್.ವಿ.ರತ್ನ, ವಿದುಷಿ ಡಾ.ಆರ್.ಎನ್.ಶ್ರೀಲತಾ, ಮೈಸೂರು ಅನಂತಸ್ವಾಮಿ, ಡಾ.ಎಸ್.ವಿಜಯರಾಘವನ್, ಎಚ್.ಆರ್.ಲೀಲಾವತಿ ಮುಂತಾದವರು. ಈ ಎಲ್ಲ ಸಂಗೀತ ವಿದ್ವಾಂಸರಿಂದ ಶಾಂತರವರು ಕರ್ನಾಟಕ ಸಂಗೀತದ ಸೂಕ್ಷ್ಮತೆಗಳನ್ನು ತಿಳಿದುಕೊಂಡು ಈಗ ತಾವೇ ಓರ್ವ ಅನುಭವಿ ಸಂಗೀತ ವಿದ್ವಾಂಸರಾಗಿದ್ದಾರೆ. ಸುಗಮ ಸಂಗೀತವು ಅವರರನ್ನು ಆಕರ್ಷಿಸದೆ ಇರಲಿಲ್ಲ. ಈ ಕ್ಷೇತ್ರದಲ್ಲಿ ತರಬೇತಿ ಕೊಟ್ಟವರು ಶ್ರೀಮತಿ ಎಚ್.ಆರ್.ಲೀಲಾವತಿ. ಕಳೆದ ಹನ್ನೊಂದು ವರ್ಷಗಳಿಂದ ಡಾ .ಸುಕನ್ಯಾ ಪ್ರಭಾಕರ್ ಬಳಿ ಶಿಷ್ಯವೃತ್ತಿ ನಡೆಸಿಕೊಂಡು ಬರುತ್ತಿದ್ದಾರೆ. ಇವರಿಗೆ ಸಂದ ಬಹುಮಾನಗಳು ಅನೇಕ.

* * *

ಮಾನವನನ್ನು ಮಾನವನ ರೀತಿಯಲ್ಲಿಯೇ ಸ್ವೀಕರಿಸಬೇಕು

– *ವಿನೋಬಾ*

ಸುಬ್ರಮಣ್ಯಂ ಗಿರಸೋ ವ್ರೋ ಅಸ್ತು. ಹೇ ಋಷಿಗಳೇ! ನಿಮಗೆ ಸುಬ್ರಮಣ್ಯನ ಲಾಭವಾಗಲಿ. ಅಂದರೆ ಉತ್ತಮ ಬ್ರಹ್ಮವಿದ್ಯೆ ಪ್ರಾಪ್ತವಾಗಲಿ. ಪ್ರತಿಗೃಬ್ಲೀತ ಮಾನವಮ್ ಸಮೇಧಸಃ – ಹೇ ಮೇಧಾವಿ ಜನರೇ! ಮಾನವತೆಯನ್ನು ಗ್ರಹಿಸಿರಿ. ಮಾನವನನ್ನು ಮಾನವನನ್ನಾಗಿಯೇ ಗ್ರಹಿಸಬೇಕು. ಇದು ವೇದದಲ್ಲಿಯ ತುಂಬ ಸುಂದರ ವಚನ.

ಇಂದು ಮನುಷ್ಯನು ಬಾಹ್ಯ ಉಪಾಧಿಗಳನ್ನು ತೆಗೆದುಕೊಂಡು ಜಗತ್ತಿನಲ್ಲಿ ಅಲೆಯುತ್ತಾನೆ. ಇದರಿಂದಾಗಿ ಅವನ ಒಳಗಿನ ತತ್ವ ಮುಚ್ಚಿ ಹೋಗುತ್ತದೆ. ಎಲ್ಲ ಉಪಾಧಿಗಳನ್ನು ಬಿಟ್ಟು ಸ್ವಲ್ಪ ಒಳಗೆ ಇಣಕಿ ನೋಡಿ ನಾವು ಯಾರೆಂಬುದನ್ನು ನೋಡೋಣ.

ನಾವು ಬೇರೆ ಬೇರೆ ಹಣೆಪಟ್ಟಿ ಅಂಟಿಸಿಕೊಂಡು ಕೆಲಸ ಮಾಡುತ್ತೇವೆ, ಮಾನವತೆಯನ್ನು ನೋಡುವುದಿಲ್ಲ. ಎಲ್ಲಿಯವರೆಗೆ ಹಣೆಪಟ್ಟಿ, ಉಪಾಧಿಗಳು ಅಂಟಿಕೊಂಡಿರುತ್ತವೋ ಅಲ್ಲಿಯವರೆಗೆ ನಮ್ಮ ದೃಷ್ಟಿ ಒಳಗೆ ಹೋಗುವುದಿಲ್ಲ. ಆದ್ದರಿಂದಲೇ ಎಲ್ಲ ಉಪಾಧಿಗಳನ್ನು ಬಿಟ್ಟು ಒಳಗೆ ಇಣುಕಿ ನೋಡಬೇಕೆಂದು ಜ್ಞಾನಿಗಳು ಹೇಳಿದ್ದಾರೆ.

ನಾನು ಶಿಕ್ಷಿತ, ಪ್ರೌಢ, ಶ್ರೀಮಂತ, ಬಡವ, ವಕೀಲ, ಡಾಕ್ಟರ್, ತಂದೆ, ಮಗ, ಅಸೆಂಬ್ಲಿ ಸದಸ್ಯ, ಯಾವುದೋ ಸಂಸ್ಥೆಯ ಅಧ್ಯಕ್ಷ, ಈ ರೀತಿಯಾಗಿ ಯಾರಲ್ಲಿ "ನಾನು" ಇರುತ್ತದೊ ಅದನ್ನು ಬೇರೆಪಡಿಸಿ ಒಳಗೆ ನನ್ನ ಸ್ವರೂಪ ಏನಿದೆ ಎಂಬುದನ್ನು ನೋಡಬೇಕು.

ಇಂದು ವಿಜ್ಞಾನ ಯುಗದಲ್ಲಿ ಮಾನವತೆಗೆ ನೇರವಾಗಿ ಸರಳಪೂರ್ವಕವಾಗಿ ಗ್ರಹಿಸುವ ಬುದ್ಧಿ ಎಲ್ಲಿಯವರೆಗೆ ಬರುವುದಿಲ್ಲವೊ ಅಲ್ಲಿಯವರೆಗೆ ಮನುಷ್ಯನ ಬುದ್ಧಿ ವಿಜ್ಞಾನ ಯುಗದೊಂದಿಗೆ ಡಿಕ್ಕಿ ಹೊಡೆಯುತ್ತಲೇ ಇರುತ್ತದೆ ಮತ್ತು ವಿಜ್ಞಾನದ ಎದುರಿಗೆ ಅವನು ಉಳಿಯಲಾರ. ವಿಜ್ಞಾನದ ಎದುರಿಗೆ ಯಾವುದೇ ಪ್ರಕಾರದ ಭೇದಗಳು ಉಳಿಯಲಾರವು. ಆತ್ಮಜ್ಞಾನದ ಎದುರಿನಲ್ಲಿಯೂ ಕೂಡ ಭೇದಗಳು ಉಳಿಯಲಾರವು. ವಿಜ್ಞಾನ ಮತ್ತು ಆತ್ಮಜ್ಞಾನಗಳೆರಡು ಭೇದಗಳ ಮೇಲೆ ನೇರ ಪ್ರಹಾರ ಮಾಡುತ್ತವೆ. ಆತ್ಮಜ್ಞಾನ ಆತ್ಮದ ಉನ್ನತಿಯ ದೃಷ್ಟಿಯಿಂದ ನೋಡುತ್ತದೆ, ಆದ್ದರಿಂದ ಅದು ನೇರ ಪ್ರಹಾರ ಮಾಡುತ್ತದೆ. ಮಾನವನು ಇಹಲೋಕದಲ್ಲಿ ಯಾವರೀತಿ ಉಳಿಯಬಲ್ಲ ಎಂಬುದರ ದರ್ಶನ ಮಾಡಿಸುತ್ತದೆ. ನೀವು ಭೇದ ಮತ್ತು ಸಂಕೋಚ ಇಟ್ಟುಕೊಂಡರೆ ಮಾನವನನ್ನು ಗ್ರಹಿಸಲು ಸಾಧ್ಯವಿಲ್ಲ. ಆ ಕಾರಣದಿಂದಾಗಿ ಪರಸ್ಪರ ದ್ವೇಷ ಹಬ್ಬುವುದು. ಅದರ ಪರಿಣಾಮ ಮೊದಲಿಗಿಂತಲೂ ಹೆಚ್ಚು ಭಯಾನಕವಾಗುವುದು. ಆದ್ದರಿಂದ ವೇದ

ಹೇಳುತ್ತದೆ – ಹೇ, ಬುದ್ಧಿವಂತರೇ, ನೀವು ಮಾನವತೆಯನ್ನು ಗ್ರಹಿಸಿರಿ, ಮಾನವನನ್ನು ಸ್ವೀಕರಿಸಿರಿ. ಒಂದು ವೇಳೆ ನಾವು ಮಾನವನನ್ನು ಮಾನವರೀತಿಯಲ್ಲಿ ಸ್ವೀಕರಿಸದೆ ಹೋದರೆ ವೇದದ ದೃಷ್ಟಿಯಲ್ಲಿ ನಾವು ಮೂರ್ಖರೆಂದು ಸಿದ್ಧವಾಗುವುದು. ಬೇರೆ ಮಾತು ಏನೇ ಆಗಿರಲಿ ನಾವಂತೂ ಮಾನವನನ್ನು ಮಾನವ ದೃಷ್ಟಿಯಿಂದಲೇ ಗ್ರಹಣ ಮಾಡಬೇಕು. ಆಗಲೇ ಜಗತ್ತಿನ ಬಹಳಷ್ಟು ಸಮಸ್ಯೆಗಳು ಪರಿಹಾರಗೊಳ್ಳುವವು.

ಉತ್ತಮಕ್ಕಿಂತ ಉತ್ತಮವಾದ ವಸ್ತುವಿನಿಂದ ಕೂಡ ಸ್ವಲ್ಪ ತೆಗೆದು ಕೊಳ್ಳಬೇಕಾಗುತ್ತದೆ. ಸ್ವಲ್ಪ ಬಿಡಬೇಕಾಗುತ್ತದೆ. ವೇದದಲ್ಲಿ ಒಂದು ಬಹು ಮಹತ್ವದ ಮಂತ್ರವಿದೆ. –

ಸಕ್ತುಮಿವ ತೀತಾ ಉನಾ ಪುನಂತಃ ಯತ್ರಧೀರಾ ಮನಸಾ ವಾಚಮಕೃತ
ಅತ್ರಾ ಸಕಾಯಃ ಸಖ್ಯಾನಿ ಜಾನತೆ ಭದ್ರೈಷಾಂ ಲಕ್ಷ್ಮೀರ್ನಿಹಾತಾಧಿವಾಚಿ

ಯಾವ ರೀತಿ ಬೀಸುವ ಕಲ್ಲು ಭತ್ತವನ್ನು ಬೀಸಿದಾಗ ನಿಃಸತ್ವ ವಸ್ತುವನ್ನು ಬಿಟ್ಟು ನಿರ್ಮಲವಾದ ಕಾಳನ್ನು ಗ್ರಹಿಸುತ್ತದೋ ಅದೇ ರೀತಿ ಯಾವ ದೇಶ ಅಥವಾ ಜಾತಿಯಲ್ಲಿ ಜ್ಞಾನಿ ಪುರುಷರಿರುತ್ತಾರೋ ಅವರು ವಾಣಿಯನ್ನು ವಿಂಗಡಿಸುತ್ತಾರೆ, ಮನನ ಪೂರ್ವಕ ಸ್ವೀಕರಿಸುತ್ತಾರೆ. ಅಲ್ಲಿ ಶ್ರೀ ಇರುತ್ತದೆ. ಯಾವ ಸಮಾಜದಲ್ಲಿ ವಾಣಿಯನ್ನು ಸಂಯಮ ಪೂರ್ವಕವಾಗಿ ಉಪಯೋಗಿಸಲಾಗುತ್ತದೋ ಅಲ್ಲಿಯೇ ಲಕ್ಷ್ಮಿಯ ನಿವಾಸವಾಗುತ್ತದೆ.

ಕಿತ್ತಳೆಯ ಹಣ್ಣನ್ನು ನಾವು ಅದು ಇರುವ ಹಾಗೆಯೇ ತಿನ್ನುವುದಿಲ್ಲ. ಸಿಪ್ಪೆಯನ್ನು ತೆಗೆದು ಬಾಯಿಯಲ್ಲಿ ಹಾಕಿಕೊಂಡು ಅಗಿದು ರಸವನ್ನು ತೆಗೆದುಕೊಳ್ಳುತ್ತೇವೆ. ಸಾರರಹಿತವಾದ ಅಂಶವನ್ನು ಹೊರಗೆ ಉಗುಳುತ್ತೇವೆ. ಉತ್ತಮೋತ್ತಮ ವಿಷಯವನ್ನು ಕೂಡ ನಾವು ಈ ಪ್ರಕಾರ ಸೇವನೆ ಮಾಡಬೇಕು. ಬಾಳೆ ಹಣ್ಣಿನ ಸಿಪ್ಪೆಯನ್ನು ತೆಗೆದು ಹಾಕಬೇಕಾಗುತ್ತದೆ. ತೆಂಗಿನಕಾಯಿಯ ಮೇಲಿನ ಎಲ್ಲ ವಸ್ತವನ್ನು ಎಸೆಯಬೇಕಾಗುತ್ತದೆ. ಪ್ರತಿಯೊಂದು ವಸ್ತುವಿನಲ್ಲಿ ಕೆಲವನ್ನು ಬಿಟ್ಟು ಉಳಿದವನ್ನು ಗ್ರಹಿಸಬೇಕಾಗುತ್ತದೆ. ಇದಕ್ಕೆ ಸಾರ–ಅಸಾರ ವಿವೇಕವೆಂದು ಹೇಳುತ್ತಾರೆ. ಇಷ್ಟು ದೊಡ್ಡ ಮಾತು ಈ ಉತ್ತಮ ಮಂತ್ರದಲ್ಲಿ ಬಂದಿದೆ. ಸರ್ವೋತ್ತಮದಿಂದಲೂ ಕೂಡ ಸಾರವನ್ನು ತೆಗೆದುಕೊಳ್ಳಬೇಕು.

ವೇದವು ಒಂದು ದೊಡ್ಡ ಉತ್ತಮ ಗ್ರಂಥ. ಅದನ್ನು ಕೂಡ ಹೇಗಿದೆಯೋ ಹಾಗೆ ತೆಗೆದುಕೊಳ್ಳಕೂಡದು. ಅದನ್ನೂ ಕೂಡ ಸಾರಸಾರವಾಗಿ ನೋಡಿ ಅಸಾರವಾದ ಭಾಗವನ್ನು ಬಿಟ್ಟು ಸಾರವನ್ನು ತೆಗೆದುಕೊಳ್ಳಬೇಕು. ಆಗಲೇ ಅದು ನಮ್ಮ ಕೆಲಸಕ್ಕೆ ಬರುವುದು. ಆದ್ದರಿಂದ ಹಳೆಯ ಗ್ರಂಥಗಳನ್ನು ನಾವು ಕಂಠಪಾಠ ಮಾಡುತ್ತಾಹೋಗುವುದು, ಧಾರ್ಮಿಕ ಉಪನ್ಯಾಸ ಕೊಡುತ್ತಾಹೋಗುವುದು. ಇದರಿಂದ ಧರ್ಮಕಾರ್ಯವಾಗುವುದಿಲ್ಲ. ಆ ಗ್ರಂಥಗಳಲ್ಲಿಯ ಒಳ್ಳೆಯ ವಿಚಾರಗಳನ್ನು ತೆಗೆದುಕೊಂಡು ತಪ್ಪು ವಿಚಾರಗಳನ್ನು ಬಿಡಬೇಕು. ಯಾವ ವಿಚಾರ ಸರಿ, ಯಾವ ವಿಚಾರ ತಪ್ಪು ಎಂಬುದನ್ನು ಗುರುತಿಸಬೇಕು. ನಂತರ ಯಾವ ಒಳ್ಳೆ ವಿಚಾರಗಳಿವೆ ಅವುಗಳಲ್ಲಿ ಇನ್ನಷ್ಟು ಒಳ್ಳೆಯ ವಿಚಾರಗಳನ್ನು ಹಾಕಬೇಕು. ಹೀಗೆ ವಿಚಾರ ಸಂಶೋಧನೆ ಕೆಲಸ ಮಾಡಬೇಕು.

ಕೆಲವು ಜನರು ಸಂಶೋಧನೆ ಮಾಡಲಾರಂಭಿಸಿದರೆ ಹಳೆಯ ಕಾಲದ ಜನರು ಒಮ್ಮೆಲೆ ಕೂಗಾಡುತ್ತಾರೆ. ಅವರ ಕೂಗಾಟದಿಂದಾಗಿ ನಾವು ನಿಜವಾದ ಮಾತನ್ನು ಜನರ ಮುಂದೆ ಇಡದೇ ಹೋದರೆ ನಾವು ಧರ್ಮವನ್ನು ಮರೆತು ಬಿಟ್ಟಿದ್ದೇವೆ ಎಂದು ಹೇಳಲಾಗುವುದು. ಲೋಕನಿಂದನೆಯನ್ನು ಸಹಿಸಲಾಗದಿದ್ದರೆ ಸತ್ಯನಿಷ್ಠತೆಯಲ್ಲಿ ಕೂಡ ದೋಷವುಂಟಾಗುವುದು. ಸತ್ಯನಿಷ್ಠತೆಯಲ್ಲಿ ಲೋಪವುಂಟಾದರೆ ಧರ್ಮ ಹೇಗೆ ಉಳಿಯಬಲ್ಲದು? ಆದ್ದರಿಂದ ಧಾರ್ಮಿಕ ಜೀವನವನ್ನು ನಡೆಸಬೇಕೆಂಬುವವರ ಮೊದಲಕೆಲಸ ವಿಚಾರ-ಸಂಶೋಧನೆಯನ್ನು ಮಾಡಲೇಬೇಕು. ಹೊಸ ಹೊಸ ವಿಚಾರಗಳನ್ನು ಗ್ರಹಿಸಬೇಕು. ಈ ರೀತಿ ಧರ್ಮ ಪ್ರತಿದಿನ ಬೆಳೆಯಬೇಕು.

ಯಾವ ಸಮಾಜದಲ್ಲಿ ಜ್ಞಾನಿ ಪುರಷರು ಮನನ ಪೂರ್ವಕವಾಗಿ ವಾಣಿಯಲ್ಲಿಯ ಒಳ್ಳೆಯ ಮತ್ತು ಕೆಟ್ಟದ್ದನ್ನು ಪರೀಕ್ಷಿಸುವರೋ ಮತ್ತು ಉತ್ತಮ, ಪಾವನ, ಪವಿತ್ರ, ಶುದ್ಧ, ನಿರ್ಮಲ, ಸ್ವಚ್ಛ, ನಿಜಸ್ವರೂಪದ ಶಬ್ದಗಳನ್ನು ಹುಡುಕಿ ತೆಗೆಯುವರೋ ಮತ್ತು ಅವುಗಳ ಉಪಯೋಗ ಮಾಡುವರೋ ಆ ಸಮಾಜದಲ್ಲಿ ಲಕ್ಷ್ಮಿ ಇರುವಳು. ಎಲ್ಲಿ ಮಂಗಳವಾದ ಮತ್ತು ಮಧುರವಾದ ವಾಣಿಯಿರುತ್ತದೋ ಅಲ್ಲಿ ಲಕ್ಷ್ಮಿ ಇರುತ್ತಾಳೆ. ಬಹಳ ಜನರು ಸರಸ್ವತೀ ಮತ್ತು ಲಕ್ಷ್ಮಿಯ ವಿರೋಧವಿದೆ ಎಂದು ಹೇಳುತ್ತಾರೆ. ಇದಕ್ಕೆ ಪೂರ್ಣ ವಿರೋಧವಾದ ಮಾತನ್ನು ಋಗ್ವೇದ ಹೇಳುತ್ತದೆ. ಲಕ್ಷ್ಮಿಗೂ ಮತ್ತು ಸರಸ್ವತಿಗೂ ವೈರತ್ವವಿದೆ ಎಂಬ ಮಾತು ಎಷ್ಟು ಅಜ್ಞಾನದ ಮಾತಾಗಿದೆ. ಸರಸ್ವತೀ ಸಂಯೋಜಕ ಶಕ್ತಿ, ಜೋಡಿಸುವ ಕೊಂಡಿ. ಹೊರಗಿನ ಮತ್ತು ಒಳಗಿನ ಜಗತ್ತನ್ನು ಜೋಡಿಸುತ್ತದೆ. ವಿಜ್ಞಾನ ಮತ್ತು ಆತ್ಮಜ್ಞಾನವನ್ನು ಜೋಡಿಸುತ್ತದೆ. ಜಗತ್ತಿನಲ್ಲಿರುವ ಎಷ್ಟೆಲ್ಲ ಶಕ್ತಿಗಳಿವೆ ಅವೆಲ್ಲವನ್ನೂ ಜೋಡಿಸುವ ಶಕ್ತಿ ಯಾವುದಾದರೂ ಇದ್ದರೆ ಅದು ವಾಣಿ. ಸರಸ್ವತೀ ಮತ್ತು ಲಕ್ಷ್ಮಿಯ ವೈರ ಹೇಗೆ ಆಗಲು ಸಾಧ್ಯ? ವೈರತ್ವವಿದೆ ಎಂದು ಹೇಳುವುದು ಸಣ್ಣ ಬುದ್ಧಿಯ ಮಾತು. ಅವರಿಗೆ ವೇದ ತೋರಿಸುವ ಸೂಕ್ಷ್ಮ ದೃಷ್ಟಿ ಇರುವುದಿಲ್ಲ. ಅಲ್ಲಿ ಲಕ್ಷ್ಮೀ ಇರುವುದಿಲ್ಲವೆಂದು ವೇದ ಹೇಳಿಲ್ಲ. ಲಕ್ಷ್ಮೀ ನಿಹಿತಾಃ ಅಂದರೆ ಲಕ್ಷ್ಮೀ ಅಡಗಿದ್ದಾಳೆ ಎಂಬುದಾಗಿ ಹೇಳಿದೆ. ವಾಣಿ ಸೂಕ್ಷ್ಮ ಶಕ್ತಿ. ಆದ್ದರಿಂದ ಅದರೊಳಗೆ ಬೇರೆ ಶಕ್ತಿಗಳು ಅಡಗಿವೆ.

ಸಂತಾಪ

ನೀಲಕಂಠ ಗಣಾಚಾರಿ

ಕರ್ನಾಟಕದ ಹಿರಿಯ ಸರ್ವೋದಯ ಕಾರ್ಯಕರ್ತರಾಗಿದ್ದ ನೀಲಕಂಠ ಗಣಾಚಾರಿಯವರು ತೀರಿಕೊಂಡಿದ್ದಕ್ಕೆ ಜನಪದ ವಿಚಾರವು ಶಾಂತಿ ಕೋರುತ್ತದೆ. ಅವರ ಆತ್ಮಕ್ಕೆ ಶಾಂತಿ ಕೋರುತ್ತದೆ. ಗಣಾಚಾರಿಯವರು ಸ್ವತಃ ನೂತ ಖಾದಿ ದಾರದಿಂದ ತಯಾರಿಸಿದ ಬಟ್ಟೆಯನ್ನು ಧರಿಸಿ ಗ್ರಾಮಗಳನ್ನ ಮದ್ಯಮುಕ್ತ, ಧೂಮಪಾನ ಮುಕ್ತಮಾಡುವುದಕ್ಕಾಗಿ ಶ್ರಮಿಸಿದರು, ಸರ್ವೋದಯ ಸಾಹಿತ್ಯವನ್ನು ಪ್ರಚಾರ ಮಾಡುತ್ತಿದ್ದರು.

ಜನಪದ ಸೇವಾ ಟ್ರಸ್ಟ್ ಸಮಾಚಾರ

ಕೃಷಿ ವಿಜ್ಞಾನಿಗಳು ಮತ್ತು ಕೃಷಿ ಪಂಡಿತರ ಎದುರಿಗೆ ತಮ್ಮ ದೈನಂದಿನ ಕೃಷಿ ಜೀವನದ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು ರೈತರು ತೀರ್ಪು ಕೊಡುವ ರಾಜ್ಯ ಮಟ್ಟದ ಕಾರ್ಯಕ್ರಮದಲ್ಲಿ ಟ್ರಸ್ಟಿನ ಕಾರ್ಯದರ್ಶಿ ಸಂತೋಷ ಕೌಲಗಿಯವರು ಸಕ್ರಿಯವಾಗಿ ಭಾಗವಹಿಸಿದರು. ಟ್ರಸ್ಟಿನ ಕಾರ್ಯಚಟುವಟಿಕೆಗಳಾದ ಖಾದಿ ಹೆಗಲು ಚೀಲ ಉತ್ಪಾದನೆ, ಖಾದಿ ಸಿದ್ಧ ಉಡುಪು ತಯಾರಿಕೆ, ಶಿಶುವಿಹಾರ, ಮಕ್ಕಳ ಕಥಾ ಕಾರ್ಯಕ್ರಮ, ಸರ್ವೋದಯ ಪಾತ್ರೆ, ಅಕ್ಕಿ ವಿತರಣೆ ಇತ್ಯಾದಿಗಳೆಲ್ಲವೂ ಚೆನ್ನಾಗಿ ನಡೆದವು. ಬೆಂಗಳೂರಿನಲ್ಲಿ ಕರ್ನಾಟಕ ಸ್ವಾಸ್ತಿಕ್ ಸೊಸೈಟಿಯವರು ಏರ್ಪಡಿಸಿದ್ದ ಉತ್ಪನ್ನಗಳ ಮಾರಟ ಮೇಳದಲ್ಲಿ ಟ್ರಸ್ಟ್‌ನ ಖಾದಿ ಉತ್ಪತ್ತಿಗಳನ್ನು ಮಾರಾಟಕ್ಕಿಡಲಾಗಿತ್ತು. ಇಂಗ್ಲೆಂಡ್‌ನ ಟೆಂಪಲ್ ಯೂನಿವರ್ಸಿಟಿಯ ನಿವೃತ್ತ ಪ್ರೊ.ಪೀಟರ್‌ಸನ್ ಭೇಟಿ ಕೊಟ್ಟರು. ಟ್ರಸ್ಟಿನ ಕಾರ್ಯ ಚಟುವಟಿಕೆಗಳನ್ನು ವೀಕ್ಷಿಸಿದರು ಅಲ್ಲದೆ ಶಿಶುವಿಹಾರಕ್ಕೆ ಭೇಟಿ ಕೊಟ್ಟು ಅಲ್ಲಿ ಮಕ್ಕಳ ಮುಂದೆ ಇಂಗ್ಲಿಷ್ ಶಿಶುಗೀತೆಗಳನ್ನು ಅಭಿನಯ ಪೂರ್ವಕವಾಗಿ ಹಾಡಿದರು. ಖಾದಿ ಸಿದ್ಧ ಉಡುಪು ವಿಭಾಗದ ಏಳು ಜನ ಮಹಿಳೆಯರನ್ನು ಸಾಗರದ ಬಳಿ ಇರುವ ಹೆಗ್ಗೋಡಿನ ಚರಕ ಸಂಸ್ಥೆಗೆ ಕರೆದುಕೊಂಡು ಹೋಗಲಾಗಿತ್ತು. ಅಲ್ಲಿ ಅವರಿಗೆ ಮಹಿಳೆಯರು ನಡೆಸುತ್ತಿರುವ ನೇಯ್ಗೆ, ಹೊಲಿಗೆ, ಅಚ್ಚು ಹಾಕುವುದು ಇತ್ಯಾದಿಗಳನ್ನು ತೋರಿಸಲಾಯಿತು, ಅಲ್ಲಿ ಮುನ್ನೂರು ಜನ ಮಹಿಳೆಯರು ಗ್ರಾಮೋದ್ಯಮದಲ್ಲಿ ತೊಡಗಿದ್ದಾರೆ. ಆ ಮಹಿಳೆಯರು ಅಭ್ಯಾಸ ಮಾಡುತ್ತಿರುವ ನಾಟಕವನ್ನು ಸಹ ನೋಡಿದರು. ಹೆಗ್ಗೋಡಿನ ಈ ಭೇಟಿಯಿಂದ ಟ್ರಸ್ಟಿನ ಹೊಲಿಗೆ ಮಹಿಳೆಯರಿಗೆ ಹೊಸ ಉತ್ಸಾಹ ಮತ್ತು ಅನುಭವ ಬಂದಿತು. ಇವರನ್ನು ಗೀತಾ ಮತ್ತು ಸಂತೋಷ್ ಕೌಲಗಿಯವರು ಹೆಗ್ಗೋಡಿಗೆ ಕರೆದುಕೊಂಡು ಹೋಗಿ ಬಂದರು. ಬೆಂಗಳೂರಿನಿಂದ ಸಿಂಚನ ಎಂಬ ಸಾಂಸ್ಕೃತಿಕ ಸಂಸ್ಥೆಯ ಹದಿನೈದು ಮಹಿಳೆಯರು ಟ್ರಸ್ಟ್‌ಗೆ ಭೇಟಿಕೊಟ್ಟರು. ಹೊಸ ಜೀವನ ದಾರಿ ಕೇಂದ್ರದಲ್ಲಿ ಊಟ ಮಾಡಿದರು. ಮೈಸೂರಿನ ಪಿರಮಿಡ್ ಧ್ಯಾನ ಸಂಸ್ಥೆಯ ಐವತ್ತು ಜನ ಮಹಿಳೆಯರು ಟ್ರಸ್ಟ್‌ಗೆ ಭೇಟಿಕೊಟ್ಟರು ಮತ್ತು ಹೊಸ ಜೀವನ ದಾರಿ ಕೇಂದ್ರದಲ್ಲಿ ತಮ್ಮ ಸಂಸ್ಥೆಯ ಕಾರ್ಯಕ್ರಮ ನಡೆಸಿದರು. ಈ ತಂಡದ ನೇತೃತ್ವವನ್ನು ಟ್ರಸ್ಟಿನ ಸ್ಥಾಪಕ ಧರ್ಮದರ್ಶಿಯಾಗಿದ್ದ ದಿ.ಪ್ರಾಣೇಶ್‌ರಾವ್‌ರವರ ಮಗಳು ಶ್ರೀಮತಿ ಬಿ.ಪಿ.ಇಂದಿರಾ ವಹಿಸಿದ್ದರು. ಸುಪ್ರಸಿದ್ಧ ಪರಿಸರವಾದಿ ಸುಂದರಲಾಲ್ ಬಹುಗುಣರವರು ಎರಡು ದಿನಗಳ ವಿಶ್ರಾಂತಿಗಾಗಿ ಟ್ರಸ್ಟ್‌ಗೆ ಬಂದರು. ಅವರು ಹೊಸ ಜೀವನ ದಾರಿ ಕೇಂದ್ರದಲ್ಲಿ ವಾಸ್ತವ್ಯ ಮಾಡಿದ್ದರು. ಅವರೊಂದಿಗೆ ಅವರ ಪತ್ನಿ ಶ್ರೀಮತಿ ವಿಮಲಾ ಬೆಹನ್ ಮತ್ತು ಮಗ ಸಂಜಯ್ ಇದ್ದರು. ಅವರನ್ನು ಭೇಟಿ ಮಾಡಲು ಮತ್ತು ಮಾತನಾಡಲು ಆಸಕ್ತಿಯಿರುವ ಮಿತ್ರರನ್ನು ಕರೆಯಲಾಗಿತ್ತು. ಸುಮಾರು ಎಪ್ಪತ್ತು ಜನ ಮಿತ್ರರು ಬೆಂಗಳೂರು ಮತ್ತು ಮೈಸೂರಿನಿಂದ ಬಂದಿದ್ದರು. ಬಹುಗುಣರವರ ಭೇಟಿಯ ಸ್ಮರಣಾರ್ಥವಾಗಿ ಬಹುಗುಣ ದಂಪತಿಗಳಿಂದ ಪ್ರತ್ಯೇಕವಾಗಿ ಎರಡು ಗಿಡಗಳನ್ನು ನೆಡಿಸಲಾಯಿತು. ಇದೇ ಸಂದರ್ಭದಲ್ಲಿ ಹೊಸ ಜೀವನ ದಾರಿಯ ಅರಣ್ಯೀಕರಣದ ಯೋಜನೆಯಂಗವಾಗಿ ಸುಮಾರು ಒಂದು

ಸಾವಿರ ಸಸಿಗಳನ್ನು ನೆಡುವ ಕಾರ್ಯಕ್ರಮವನ್ನು ಸಂತೋಷ್ ಸಭೆಯಲ್ಲಿ ಘೋಷಿಸಿದರು ಹಾಗೂ ಒಂದು ಸಸಿಯ ಐದು ವರ್ಷದ ಪೋಷಣೆ ಮತ್ತು ರಕ್ಷಣೆ ಇತ್ಯಾದಿ ಖರ್ಚಿಗೆ ಒಂದು ಸಾವಿರ ರುಪಾಯಿ ಖರ್ಚಾಗುವುದು ಎಂದು ಹೇಳಿದರು. ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ಕರೆಕೊಟ್ಟರು. ಅದಕ್ಕೆ ಪ್ರತಿಯಾಗಿ ಇಬ್ಬರು ಸ್ನೇಹಿತರು ಸಹಾಯದ ಭರವಸೆ ಕೊಟ್ಟರು. ಬೆಂಗಳೂರಿನ ದೂರದರ್ಶನದ ಚಂದನ ವಾಹಿನಿಯಲ್ಲಿ ಗಾಂಧೀ ಚಿಂತನ ಕಾರ್ಯಕ್ರಮದಲ್ಲಿ ಸುರೇಂದ್ರ ಕೌಲಗಿಯವರು ಭಾಗವಹಿಸಿದ್ದರು.

೨೦೦೯ ಡಿಸೆಂಬರ್ ಮಾಹೆಯ ದಾನಿಗಳು

ಶ್ರೀಮತಿ ಉಷಾ ಅಥಣೀಕರ್; ಶ್ರೀ ಬ್ರಹ್ಮದೇವಯ್ಯ;
ಶ್ರೀ ಎಸ್.ಎನ್.ಪ್ರಸಾದ್-ಬೆಂಗಳೂರು
ಶ್ರೀ ನಂಜಾರೆಡ್ಡಿ-ಚಿಂತಾಮಣಿ ಮತ್ತು ಸಂಸ್ಥೆಯ ಮಾಹೆಯಾನ ದಾನಿಗಳಾದ
ಶ್ರೀ ರತ್ನಾಕರನಾಯಕ್, ಶ್ರೀಮತಿ ಸುಜಾತ, ಶ್ರೀಮತಿ ಜೊಸೆಫಿನಾ ಮೇರಿ,
ಶ್ರೀ ಎಸ್.ಕೆ.ಅಶ್ವತ್ಥನಾರಾಯಣ್, ಶ್ರೀ ನಾಗೇಶ್ ಕಾಮತ್,
ಶ್ರೀಮತಿ ರಮಾಮಣಿರಾವ್-ಬೆಂಗಳೂರು
ಶ್ರೀಮತಿ ಸಾವಿತ್ರಮ್ಮ-ಹಾಸನ; ಶ್ರೀ ಸಾಂಬಶಿವಯ್ಯ-ಮಂಗಳೂರು
ಶ್ರೀ ಎಸ್.ಎನ್.ಶ್ರೀಧರಮೂರ್ತಿ-ದಾವಣಗೆರೆ ಇವರುಗಳಿಗೆ ಟ್ರಸ್ಟ್ ತನ್ನ ಕೃತಜ್ಞತೆಯನ್ನು ಸಮರ್ಪಿಸುತ್ತದೆ.

ಸಂತಾಪ

ಟಿ.ಎಸ್.ಸತ್ಯನ್

ತಮ್ಮ ಛಾಯಾಚಿತ್ರ ಕಲೆಯ ಮೂಲಕ ಸುಮಾರು ಎಪ್ಪತ್ತು ವರ್ಷಗಳ ಕಾಲ ಕಾಲಕ್ಕೆ ಕನ್ನಡಿ ಹಿಡಿಯುವಂಥ ಚಿತ್ರಗಳನ್ನು ತೆಗೆದು ಫೋಟೋಗ್ರಫಿಯ ಮೇಲೆ ತಮ್ಮ ಹಿಡಿತವನ್ನು ಸಾಧಿಸಿ ಕರ್ನಾಟಕ ಹಾಗೂ ಭಾರತದ ಎಲ್ಲೆ ಮೀರಿ ಅಂತರರಾಷ್ಟ್ರೀಯ ಮಟ್ಟಕ್ಕೆ ಏರಿ ಖ್ಯಾತಿ ಪಡೆದ ಟಿ.ಎಸ್.ಸತ್ಯನ್ ೧೩-೧೨-೨೦೦೯ರಂದು ತೀರಿಕೊಂಡರು. ಸತ್ಯನ್‌ರವರು ಜನಪದ ಸೇವಾ ಟ್ರಸ್ಟ್‌ನ ಅಭಿಮಾನಿಯಾಗಿದ್ದರು. ಸತ್ಯನ್‌ರವರ ನಿಧನಕ್ಕೆ ಜನಪದ ವಿಚಾರ ಸಂತಾಪ ವ್ಯಕ್ತಪಡಿಸುತ್ತದೆ ಮತ್ತು ಅವರ ಆತ್ಮಕ್ಕೆ ಶಾಂತಿಕೋರುತ್ತದೆ.


* * *

ಡಿ.ವಿ.ಕೆ

ಕರ್ನಾಟಕದ ಶ್ರೇಷ್ಠ ಪುಸ್ತಕಗಳ ಪ್ರಕಾಶಕರ ಪಂಕ್ತಿಯಲ್ಲಿ ಅದ್ವಿತೀಯರಾಗಿದ್ದ ಮತ್ತು ಡಿ.ವಿ.ಕೆ ಎಂದೇ ಪ್ರಸಿದ್ಧರಾಗಿದ್ದ ಡಿ.ವಿ.ಕೃಷ್ಣಮೂರ್ತಿಯವರು ೯-೧೨-೨೦೦೯ರಂದು ನಿಧನರಾದರು. ಅವರ ಆತ್ಮಕ್ಕೆ ಜನಪದ ವಿಚಾರ ಶಾಂತಿ ಕೋರುತ್ತದೆ. ಡಿ.ವಿ.ಕೆ. ನಿಧನರಾದರೂ ಅವರು ಪ್ರಕಟಿಸಿದ್ದ ಶ್ರೇಷ್ಠ ಕನ್ನಡ ಸಾಹಿತ್ಯ ಅವರನ್ನು ಅಮರರನ್ನಾಗಿ ಮಾಡಿದೆ.

ಜನಪದ ನಿಲಯದ ಅಂತರಂಗದಲ್ಲಿ .. ೭೪

– ಸುರೇಂದ್ರ ಕೌಲಗಿ



ಜಯಪ್ರಕಾಶ ನಾರಾಯಣರು ಹುಟ್ಟಿದ್ದು ೧೯೦೨. ನನ್ನ ಜನನವಾದದ್ದು ೧೯೩೪. ಜಯಪ್ರಕಾಶರ ಸೇವೆಯಲ್ಲಿ ನಾನು ತೊಡಗಿದಾಗ ನನ್ನ ಪ್ರಾಯ ೧೮. ಜೆ.ಪಿ.ಯವರ ವಯಸ್ಸು ೫೨ ಅಂದರೆ ನಮ್ಮಿಬ್ಬರ ಮಧ್ಯೆ ೩೪ ವರ್ಷಗಳ ವ್ಯತ್ಯಾಸ. ವಯಸ್ಸಿನ ಈ ವ್ಯತ್ಯಾಸವಲ್ಲದೆ ಜೀವನ ಅನುಭವದಲ್ಲಿ ಇದ್ದ ವ್ಯತ್ಯಾಸ ಭೂಮಿ ಆಕಾಶದಷ್ಟು. ಅಲ್ಲದೆ ವಿದ್ಯಾಭ್ಯಾಸ ವಿಚಾರದಲ್ಲೂ ಇದ್ದ ವ್ಯತ್ಯಾಸ ದೊಡ್ಡದು. ಈ ಎಲ್ಲ ಪ್ರಕಾರದ ವ್ಯತ್ಯಾಸಗಳಿಂದಾಗಿ ನಾನು ಅವರ ಸೇವೆಯಲ್ಲಿದ್ದಾಗ ಸುತ್ತಲಿನ ಜೀವನವನ್ನು ಕುತೂಹಲದಿಂದ ನೋಡುವ ಯುವಕನಾಗಿದ್ದೆ.

ಎಲ್ಲ ವಿಷಯವು ಹೊಸದು. ಭಾಷೆಯೂ ಹೊಸದು. ಸುತ್ತಲಿನ ವ್ಯಕ್ತಿಗಳೂ ಹೊಸಬರು. ಆದರೂ ಕೂಡ ೧೯೪೨ರ ಚಳುವಳಿಯ ಕಾಲದಲ್ಲಿ ಭಾಗವಹಿಸುತ್ತಿದ್ದ ಸೇವಾದಳದ ಅನುಭವಗಳು ಮತ್ತು ಸ್ವಾತಂತ್ರ್ಯ ಚಳುವಳಿಯ ಕೆಲ ನೋಟಗಳು ಮನಸ್ಸಿನ ಮೇಲೆ ಬೀರಿದ್ದ ಪ್ರಭಾವ ಹಾಗೂ ವಿನೋಬಾರ ಭೂದಾನ ಆಂದೋಲನದ ಸಿದ್ಧಾಂತದ ಪ್ರಭಾವ ಧೃತಿಗೆಡದಂತೆ ನನ್ನನ್ನು ಕಾಪಾಡಿದವು. ದೈವದತ್ತವಾಗಿ ಬಂದ ಸಾಮಾನ್ಯಜ್ಞಾನ ಮತ್ತು ಕ್ರಮೇಣ ಲಭ್ಯವಾಗುತ್ತಿದ್ದ ಅನುಭವ ಇವುಗಳನ್ನೇ ಜೊತೆಗೂಡಿಸಿ ಆ ಮಹಾನ್‌ವ್ಯಕ್ತಿಯ ಸೇವೆಯನ್ನು ಐದು ವರ್ಷಗಳ ಕಾಲ ಮಾಡಲು ಸಾಧ್ಯವಾಯಿತು. ಆ ಐದು ವರ್ಷಗಳ ಸೇವೆಯ ಅವಧಿಯಲ್ಲಿ ಯಾವುದೇ ಒಂದು ಕಾರಣದ ನಿಮಿತ್ತ ಅಸಮರ್ಥ ಎಂದೆನಿಸಿಕೊಳ್ಳುವ ಸಂದರ್ಭ ಬರದೆ ಇದ್ದದ್ದು ನನಗೆ ತುಂಬ ಹೆಮ್ಮೆಯ ಸಂಗತಿಯಾಗಿದೆ. ಕಾಲಕಳೆದಂತೆ ಜಯಪ್ರಕಾಶರಿಗೆ ನಾನೊಬ್ಬ ಅನಿವಾರ್ಯ ವ್ಯಕ್ತಿ ಎಂದು ಅನಿಸತೊಡಗಿತು. ಜೆ.ಪಿ.ಯವರಿಗಿಂತ ಅವರ ಪತ್ನಿ ಪ್ರಭಾವತಿಯವರ ಮನ್ನಣೆ ಪಡೆಯುವುದು ದುಸ್ಥರವಾಗಿತ್ತು. ಪ್ರಭಾವತಿಯವರು ಗಾಂಧೀಯವರ ಸಾಬರಮತಿ ಆಶ್ರಮದಲ್ಲಿ ಬೆಳೆದವರು ಮತ್ತು ನೇರವಾಗಿ ಗಾಂಧಿಯಿಂದ ಶಿಕ್ಷಣ ಪಡೆದವರು ಮತ್ತು ಆಶ್ರಮದ ಶಿಸ್ತನ್ನು ಪಾಲಿಸಿದವರು. ಇಂಥ ಪ್ರಭಾವತಿಯವರ ವಿಶ್ವಾಸ ಮತ್ತು ಪ್ರೇಮವನ್ನು ಸಂಪಾದಿಸಿದ್ದು ಕೂಡ ಹೆಗ್ಗಳಿಕೆಯ ವಿಷಯವೆಂದು ಅನಿಸುತ್ತದೆ. ಜೆ.ಪಿ.ಯವರು ಸಮಾಜವಾದಿ ಆಂದೋಲನದಲ್ಲಿದ್ದಾಗ ಅವರೊಂದಿಗೆ ಕೆಲಸಮಾಡುವುದು ಕಷ್ಟವಾಗುತ್ತಿತ್ತು ಎಂಬುವುದರಲ್ಲಿ ಸಂದೇಹವಿಲ್ಲ. ಅವರ ಬಳಿ ಸೇವೆಗೆ ಹೋದಾಗ ಅವರು ಸಮಾಜವಾದಿ ಮತ್ತು ಸಾಮ್ಯವಾದಿ ವಿಚಾರಗಳಿಂದ ಭ್ರಮ ನಿರಸನಗೊಂಡು ಸರ್ವೋದಯ ಆಂದೋಲನಕ್ಕೆ ತಮ್ಮ ಜೀವನದಾನ ಮಾಡಿದ್ದರು. ೧೯೫೪ರ ಹೊತ್ತಿಗೆ ಅವರ ಜೀವನ ಪಕ್ವಗೊಂಡಿತು. ಅವರ ವಿಚಾರಗಳು ಸೌಮ್ಯವಾಗಿದ್ದವು ಆದ್ದರಿಂದ ನಾನು ಹದಿಹರಯದ ವಯಸ್ಸಿನವನಾಗಿದ್ದರೂ ಅವರೊಂದಿಗೆ ಕೆಲಸಮಾಡಲು ಸಾಧ್ಯವಾಯಿತು. ಪ್ರಭಾವತಿ ಮತ್ತು ಜಯಪ್ರಕಾಶ ನಾರಾಯಣರಂಥ ರಾಷ್ಟ್ರನಾಯಕ ದಂಪತಿಗಳ

ಸೇವೆಯನ್ನು ಅವರಿಬ್ಬರ ಪಕ್ವ ಜೀವನಾವಸ್ಥೆಯಲ್ಲಿ ಅವರೊಂದಿಗಿದ್ದು ಕೆಲಸಮಾಡಿದ್ದರಿಂದ ಸಮಾಜಸೇವೆ ಬಗ್ಗೆ ವಿಶಿಷ್ಟ ಗುಣಸ್ವಭಾವ ನಡವಳಿಕೆ ಬೆಳೆಸಿಕೊಳ್ಳಲು ಸಾಧ್ಯವಾಯಿತು. ಅವರ ಸೇವೆಯಿಂದ ಸ್ವಯಿಚ್ಛೆಯಿಂದ ಬಿಡುಗಡೆಗೊಂಡು ಐವತ್ತು ವರ್ಷಗಳಾದರೂ ಕೂಡ ಅವರ ಸೇವೆಯಲ್ಲಿದ್ದ ದಿನಗಳು ಅವರೊಂದಿಗಿನ ಒಡನಾಟ ಮುಂತಾದವುಗಳೆಲ್ಲ ಮನದಾಳದಲ್ಲಿ ಹಚ್ಚಹಸಿರಾಗಿಯೇ ಇವೆ. ಅಲ್ಲದೆ ಅವು ಇಂದೂ ಸ್ಫೂರ್ತಿ ಮತ್ತು ಪ್ರೇರಣೆ ಮತ್ತು ದಿಗ್ದರ್ಶನ ಮಾಡುತ್ತಿವೆ. ಜೆ.ಪಿ.ಯವರ ಬಳಿ ಸೇರಲು ಬಿಹಾರಕ್ಕೆ ಮುಂಬೈ ನಗರದಿಂದ ಹೋದಾಗ ನಿಜವಾಗಿಯೂ ಭಾರತದ ಭೌಗೋಳಿಕ ಸನ್ನಿವೇಶ ಗೊತ್ತಿರಲಿಲ್ಲ. ಪ್ರಾರಂಭದ ಕೆಲವು ತಿಂಗಳುಗಳ ಕಾಲ ಜೆ.ಪಿ.ಯವರೊಂದಿಗೆ ಪ್ರವಾಸದಲ್ಲಿದ್ದಾಗ ಯಾವ ದಿಕ್ಕಿಗೆ ಯಾವ ಪ್ರದೇಶಕ್ಕೆ ಹೊರಟಿದ್ದೇನೆ ಎಂಬುದನ್ನು ಕಲ್ಪನೆ ಮಾಡುವುದು ಕಷ್ಟವಾಗಿತ್ತು. ಜೆ.ಪಿ.ಯವರೊಂದಿಗಿನ ಪ್ರವಾಸ ಎರಡು ಮೂರು ದಿನಗಳಷ್ಟು ದೀರ್ಘವಾಗಿರುತ್ತಿತ್ತು. ಅನೇಕ ಕಡೆ ಮುಖ್ಯವಾದ ಜಂಕ್ಷನ್‌ಗಳಲ್ಲಿ ಮಧ್ಯರಾತ್ರಿ ಅಥವಾ ಬೆಳಗಿನ ಜಾವ ರೈಲುಗಳನ್ನು ಬದಲಾಯಿಸಬೇಕಾಗುತ್ತಿತ್ತು. ರೈಲಿನಲ್ಲಿ ಜೆ.ಪಿ.ಯವರು ಪ್ರಥಮ ದರ್ಜೆಯಲ್ಲಿ ಪ್ರಯಾಣ ಮಾಡಿದರೆ ನಾನು ಮೂರನೆ ದರ್ಜೆಯಲ್ಲಿ ಪ್ರಯಾಣ ಮಾಡುತ್ತಿದ್ದೆ. ಅವರ ಬೋಗಿಯು ಮತ್ತು ನಾನು ಪ್ರಯಾಣಿಸುತ್ತಿದ್ದ ಬೋಗಿಗೂ ಸಾಕಷ್ಟು ದೂರ ಇರುತ್ತಿತ್ತು. ಅಲ್ಲದೆ ಜೆ.ಪಿ.ಯವರು ಮತ್ತು ಪ್ರಭಾವತಿ ತಮಗೆ ಬೇಕಾದ ಸಾಮಾನುಗಳನ್ನು ಹಲವಾರು ದೊಡ್ಡ ದೊಡ್ಡ ಪೆಟ್ಟಿಗೆಗಳಲ್ಲಿ ಇಟ್ಟುಕೊಳ್ಳುತ್ತಿದ್ದರು. ರೈಲನ್ನು ಬದಲಾಯಿಸ ಬೇಕಾದಾಗ ಕೂಲಿಗಳನ್ನು ಬರಮಾಡಿಕೊಂಡು ಎಲ್ಲ ಸಾಮಾನುಗಳನ್ನು ಬೇಗ ಬೇಗ ಇಳಿಸಬೇಕಾಗುತ್ತಿತ್ತು. ಸಾಮಾನುಗಳು ಯಾವುದೂ ತಪ್ಪಿಹೋಗದಂತೆ ಗಮನಕೊಡಬೇಕಾಗುತ್ತಿತ್ತು. ಮುಂದೆ ಇದೆಲ್ಲವನ್ನು ಬೇರೆ ರೈಲಿಗೆ ಸ್ಥಳಾಂತರಿಸ ಬೇಕಿತ್ತು. ಈ ಕೆಲಸ ಬಹಳ ಕಷ್ಟದಾಯಕ ಎನಿಸುತ್ತಿತ್ತು. ಆದರೆ ಸುದೈವದಿಂದ ಒಂದು ಬಾರಿಯೂ ಯಾವುದೇ ಒಂದ ಪದಾರ್ಥ ಕಳೆಯದೆ ಪ್ರಯಾಣ ಸುಖಕರವಾಗಿ ಮಾಡುತ್ತಿದ್ದುದು ಹೇಗೆ ಎಂದು ಆಶ್ಚರ್ಯವಾಗುತ್ತದೆ. ಒಂದು ಬಾರಿ ಪ್ರಯಾಣದಲ್ಲಿದ್ದಾಗ ಒಂದು ಜಂಕ್ಷನ್‌ನಲ್ಲಿ ರೈಲನ್ನು ಬದಲಾಯಿಸಬೇಕಿತ್ತು. ಅದು ಮಧ್ಯರಾತ್ರಿ ಸಮಯ. ನನಗೆ ನಿದ್ರೆ ಬಂದು ಮಲಗಿಬಿಟ್ಟಿದ್ದೆ. ಆದರೆ ಜೆ.ಪಿ. ಮತ್ತು ಪ್ರಭಾವತಿ ತಮ್ಮ ಜಾಗರೂಕತೆಯ ಕಾರಣದಿಂದ ಕೆಳಗಿಳಿದು ತಮ್ಮೆಲ್ಲ ಸಾಮಾನುಗಳನ್ನು ಕೆಳಗಿಳಿಸಿಕೊಂಡಿದ್ದರು. ಆದರೆ ನಾನು ಮಾತ್ರ ಇರಲಿಲ್ಲ. ಆಗ ಜಯಪ್ರಕಾಶರು ತಮ್ಮ ಬೋಗಿಯ ಅಕ್ಕಪಕ್ಕದ ಮೂರನೆದರ್ಜೆಯ ಬೋಗಿಗಳತ್ತ ಧಾವಿಸಿ ಸುರೇಂದ್ರ, ಸುರೇಂದ್ರ ಎಂದು ಕೂಗುತ್ತಾ ನನ್ನನ್ನು ಹುಡುಕಲು ಪ್ರಯತ್ನಿಸಿದರು. ಅವರ ಧ್ವನಿ ಕೇಳಿ ಎಚ್ಚರಗೊಂಡ ನಾನು ಗಾಬರಿಯಿಂದ ದಡಬಡನೆ ಕೆಳಗಿಳಿದೆ. ಮುಂದೆ ಅವರೊಂದಿಗೆ ಪ್ರಯಾಣ ಬೆಳೆಸಿದೆ ಈ ಒಂದು ಅಚಾತುರ್ಯ ಘಟನೆಯಾದಮೇಲೆ ಅವರೊಂದಿಗೆ ಪ್ರವಾಸದಲ್ಲಿದ್ದಾಗ ಬಹಳ ಜಾಗರೂಕನಾಗಿದ್ದೆ. ಅವರ ಸೇವೆಯಲ್ಲಿ ತೊಡಗಿದಾಗ ನನಗೆ ಹಿಂದಿ ಭಾಷಾ ಜ್ಞಾನ ವ್ಯಾಕರಣಬದ್ಧವಾಗಿ ಗೊತ್ತಿರಲಿಲ್ಲ. ಆದ್ದರಿಂದ ಅವರ ಕಾಗದಗಳನ್ನು ಅವರ ಹೇಳಿಕೆಯ ಮೇರೆಗೆ ಬರೆದುಕೊಂಡಾಗ ಆಗುತ್ತಿದ್ದ ತಪ್ಪುಗಳನ್ನು ತಿದ್ದಿ ಭಾಷಾ ಶುದ್ಧಿಗೆ ನೆರವಾಗುತ್ತಿದ್ದರು. ನಾನು ಬೇಗ ಹಿಂದಿ ಭಾಷೆ ಕಲಿತುಕೊಂಡು ಟೈಪ್ ಮಾಡುವುದನ್ನು ಸಹ ಕಲಿತೆ. ಆಗಲೇ ನನಗೆ ಇಂಗ್ಲಿಷ್ ಶಾರ್ಟ್‌ಹ್ಯಾಂಡ್ ಮತ್ತು ಟೈಪಿಂಗ್ ಗೊತ್ತಿತ್ತು. ಮುಂದೆ ಹಿಂದಿ ಶಾರ್ಟ್‌ಹ್ಯಾಂಡ್ ಕಲಿಯಲು ನನ್ನನ್ನು ಬನಾರಸ್‌ಗೆ ಕಳುಹಿಸಿದ್ದರು. ಆರು ತಿಂಗಳು ಕಾಲ ಅಲ್ಲಿದ್ದು ಪಡೆದ ಅನುಭವ ನನ್ನ ಸಾರ್ವಜನಿಕ ಜೀವನದ ದಾರಿದೀಪವಾಯಿತು. * * *

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀ ವಿ.ಗಣೇಶ್ – ಮೈಸೂರು

ಈ ಬಂಧುಗಳು ತಮ್ಮ ಚಂದಾ ನವೀಕರಿಸಿದ್ದಾಕ್ಕಾಗಿ ಹಾಗೂ
ಹೊಸದಾಗಿ ಪತ್ರಿಕೆಗೆ ಚಂದಾದಾರರಾದ,

ಶ್ರೀ ಟಿ.ಎಸ್.ಚನ್ನೇಶ್ – ಬೆಂಗಳೂರು

ಶ್ರೀ ಎಸ್.ಆರ್.ಕೇಶವಮೂರ್ತಿ – ಮೈಸೂರು

ಇವರಿಗೆ ಕೃತಜ್ಞತೆಗಳು.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯುನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

–ಸಂಪಾದಕರು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ
(–ಸಂಪಾದಕರು)

ತೆರೆದ–ಅಂಚೆ

KA / SK / MND / 470 / 2009-2011
Regd. no. KAR / KAN / 2000 / 3820

ಶ್ರೀಮತಿ/ ಶ್ರೀ...

....

....

JANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431 DTP Sanketh, Melkote. Printed at Sanketh, Mudrana, Melkote. Phone : 08236 – 299998 e-mail : janapada@yahoo.com web : janapada.net